ಪ್ರತಿಬಿಂಬ
PRATIBIMBA –Multidisciplinary Kannada Research Journal of IIMRD
ISSN: 2582-2284
Vol-7 Issue-1, July-August 2025, Pp. 29-42
©*IIMRD*, Mysuru
IIMRD JOURNALS
www.iimrd.com

# ಕೊಟ್ಟೂರಿನ ಪಂಚ ಮಠಗಳ ವಿಶ್ಲೇಷಣೆ

**ಡಾ. ಪ್ರವೀಣಕುಮಾರ ಬಿ.**
ಸಂಶೋಧಕರು, ಹಗರಿಬೊಮ್ಮನಹಳ್ಳಿ

**ಸಾರಾಂಶ: (Abstract)**

*ಕರ್ನಾಟಕದಲ್ಲಿ ಪಂಚಮಠಗಳ ಸ್ಥಳ ಎಂದು ಹೆಸರಾದ ಕೊಟ್ಟೂರು ಈ ಸ್ಥಳವನ್ನು ಸಂತರ ನಾಡು ಎಂದು ಕೂಡ ಕರೆಯುತ್ತಾರೆ. ಕರ್ನಾಟಕದ ಯಾವ ಸಂತರಿಗೂ ಕೂಡ ಒಂದೇ ಗ್ರಾಮದಲ್ಲಿ ಐದು ಬೃಹತ್ ಮಠಗಳು ನೋಡಲು ಸಾಧ್ಯವಿಲ್ಲ ಆದರೆ ಈ ಶಿಖಾರಿಪುರ ಕೊಟ್ಟೂರಿನಲ್ಲಿ ಪಂಚಗಣದೀಶರುಗಳ ಕೊಟ್ಟೂರೇಶ್ವರ ಪಂಚಮಠಗಳನ್ನು ನಾವು ಕಾಣಬಹುದು. ಈ ಮಠಗಳಲ್ಲಿ ಯಾವುದೇ ಜಾತಿಭೇದಗಳಿಲ್ಲದೆ ಪ್ರವೇಶ ಮುನ್ನಡೆಯುತ್ತದೆ ಲೋಕಕಲ್ಯಾಣಕ್ಕಾಗಿ ಬಂದಂತಹ ಗಣದೀಶರು ಅನಿವಾರ್ಯ ಕಾರಣದಿಂದ ಇವತ್ತಿನ ವಾಸ್ತವದ ಬದುಕಿನಲ್ಲಿ ಜಾತಿಯ ಬಲೆಯಲ್ಲಿ ಬಿದ್ದು ಬಂಧನಕ್ಕೆ ಒಳಗಾಗಿದ್ದಾರೆ. ಪ್ರಸ್ತುತ ಲೇಖನದಲ್ಲಿ ಕೊಟ್ಟೂರಿನ ಪಂಚಮಠಗಳನ್ನು ಕುರಿತು ವಿಶ್ಲೇಷಿಸಲಾಗಿದೆ.*

**ಮುಖ್ಯಪದಗಳು (Keywords):** ಕೊಟ್ಟೂರು, ಪಂಚಮಠಗಳು, ಹಿರೇಮಠ.

## ಪೀಠಿಕೆ

ಕೊಟ್ಟೂರೇಶ್ವರನು ವೀರಶೈವ ಸಮುದಾಯದ ಗುರುವೆಂದು ಕರೆಯಲಾಗುತ್ತದೆ ಕೊಟ್ಟೂರಿನ ಕೊಟ್ಟೂರೇಶ್ವರ ಪಂಚ ಮಠಗಳಲ್ಲಿ ತ್ರಿಕಾಲ ಪೂಜೆ ಪುನಸ್ಕಾರಗಳು ಪ್ರತಿನಿತ್ಯ ನೆರವೇರುತ್ತದೆ. ಕರ್ನಾಟಕದಲ್ಲಿ ತ್ರಿಕಾರುಣ್ಯ ಪ್ರಸಾದ ಮತ್ತು ತ್ರಿಕಾಲ ಪೂಜೆ ನಡೆಯುವಂತಹ ಸಂತರ ಏಕೈಕ ಮಠ ಎಂದರೆ ಕೊಟ್ಟೂರೇಶ್ವರ ಮಠ ಎಂದು ಕರೆದರೆ ತಪ್ಪಾಗಲಾರದು ಐದು ಮಠಕ್ಕೂ ಕೂಡ ಒಂದೊಂದು ಚರಿತ್ರೆಗಳು ಬಿಚ್ಚಿಕೊಳ್ಳುತ್ತವೆ ಮಠಗಳ ಸಂಪೂರ್ಣ ವಿವರಣೆ ಕೆಳಕಂಡಂತೆ ವಿವರಿಸಲಾಗಿದೆ.

## ಹಿರೇಮಠ

ಕೊಟ್ಟೂರೇಶ್ವರ ಸ್ವಾಮಿಯ ನಡುವಳಿ ಅತಿ ಹೆಚ್ಚು ನಡುವಳಿ ಇರುವಂತಹ ಮಠ ಎಂದರೆ ಈ ಹಿರೇಮಠ. ಹಿರೇಮಠವನ್ನು ದರ್ಬಾರ್ ಮಠ ಎಂದೂ ಕೂಡ ಕರೆಯುತ್ತಾರೆ. ದೊಡ್ಡ ಮಠ ಎಂಬ ಪ್ರತೀತಿಯೂ ಇದೆ. ಈ ಮಠಕ್ಕೆ ಅನೇಕ ರೀತಿಯ ಭಕ್ತಸಾಗರದ ದಂಡು ಹರಿದು ಬರುವುದು ಕಂಡುಬರುತ್ತದೆ. ಮಠವು ಕೋಟೆಯ ಪ್ರದೇಶದಲ್ಲಿದೆ. ಹಿರೇಮಠವು ಮೂಲ ಕೊಟ್ಟೂರೇಶ್ವರ ಮಠ ಅಲ್ಲ ಎಂದು ವಕ್ತ್ರಗಳಿಂದ ತಿಳಿಯುತ್ತದೆ. ಕಾರಣ ಮಠವು ದೇವಸ್ಥಾನದ ಮೂಲ ವೀರಭದ್ರೇಶ್ವರ ಸ್ವಾಮಿಯ ದೇವಸ್ಥಾನವಾಗಿತ್ತೆಂದು ಹೇಳುತ್ತಾರೆ. ದೇವಸ್ಥಾನಕ್ಕೆ ಸಾಕ್ಷಿ ಎಂಬಂತೆ ಹಿರೇಮಠದ ಗರ್ಭಗುಡಿಯ ಒಳಗೆ

ವೀರಭದ್ರ ಸ್ವಾಮಿಯ ಸುಂದರವಾದ ಕಲ್ಲಿನ ಕೆತ್ತನೆ 4 ಅಡಿ ಎತ್ತರದ ಮೂರ್ತಿಯನ್ನು ಈಗಲೂ ಇರುವುದು ಕಂಡುಬರುತ್ತದೆ. ವೀರಭದ್ರೇಶ್ವರ ಸ್ವಾಮಿಯ ದೇವಾಲಯದಲ್ಲಿರುವ ಮೂರ್ತಿಯು ಭಿನ್ನವಾಗಿರುವುದು ಕಾಣುತ್ತೇವೆ. ಮಠದ ಬಗ್ಗೆ ವಿದ್ವಾಂಸರ ಉಲ್ಲೇಖದಂತೆ "ಪಂಚಗಣಾಧೀಶರ ಪಂಥದಲ್ಲಿ ವಿಶಿಷ್ಟ ಸ್ಥಾನವನ್ನು ಗಳಿಸಿರುವುದು ಹನುಮಂತನಷ್ಟೇ ಅಲ್ಲ ವೀರಭದ್ರ ಮತ್ತು ಮಾರಮ್ಮ ಕೂಡ ಈ ರೀತಿಯ ಸ್ಥಾನವನ್ನು ಗಳಿಸಿದ್ದಾರೆ. ಕೊಟ್ಟೂರಿನ ಹಿರೇಮಠ ಮೊದಲಿಗೆ ವೀರಭದ್ರ ದೇವಾಲಯ ಆಗಿತ್ತು. ಹಾಗೆಯೇ ನಾಯಕನಹಟ್ಟಿಯ ಶ್ರೀ ತಿಪ್ಪೇಸ್ವಾಮಿಯ ಮಠವು ಮೊದಲು ಮಾರಮ್ಮನ ದೇವಾಲಯ ಆಗಿತ್ತು. ಇಂದು ಅದು ಎರಡು ಭಾಗವಾಗಿ ಪರಿವರ್ತನೆಯಾಗಿವೆ. ಈ ಭಾಗದ ಪ್ರಮುಖ ವೀರಶೈವ ಮಠಗಳಾಗಿವೆ. ಎರಡೂ ಕಡೆ ಹೆಚ್ಚು ಕಡಿಮೆ ಒಂದೇ ರೀತಿಯಾದ ಮಿಥ್ ಇವೆ. ಕೊಟ್ಟೂರು ಗುರುಬಸವ ಊರಿಗೆ ಬಂದು ಪ್ರಸಿದ್ಧಿ ಹೊಂದಿದ ನಂತರ ವೀರಭದ್ರ ದೇವಾಲಯದಲ್ಲಿ(ಹಿರೇಮಠ) ಜನರಿಗೆ ತತ್ವ ಉಪದೇಶ ಮಾಡುತ್ತಿದ್ದನು. ಈ ದೇವಾಲಯಕ್ಕೆ ಬರುವ ಭಕ್ತಾಧಿಗಳ ಸಂಖ್ಯೆ ಹೆಚ್ಚಾಗಿ ಇದೇ ಕೊಟ್ಟೂರು ಗುರುಬಸವನ ಹಿರೇಮಠವಾಗಿ ಪರಿಣಮಿಸಿದೆ. ಮಠದ ಗರ್ಭಗುಡಿ ಇದೆ. ವೀರಭದ್ರ ದೇವರ ಸಣ್ಣ ಗರ್ಭಗುಡಿ ಇದೆ. ಇದನ್ನು ನೋಡುವ ಜನರು ಕೊಟ್ಟೂರೇಶ್ವರ(ಗುರುಬಸವ) ವೀರಭದ್ರನನ್ನು ಓಡಿಸಿ(ಕೊಡದ ಗುಡ್ಡಕ್ಕೆ) ತಾನು ಇಲ್ಲಿ ಸೇರಿಕೊಂಡನೆಂದು ಹೇಳುತ್ತಾರೆ. ಪ್ರಾಚೀನ ಶೈವ ಪಂಥದ ಪ್ರತೀತನಾದ ವೀರಭದ್ರನ ದೇವಾಲಯದಲ್ಲಿ ಕೊಟ್ಟೂರು ಗುರುಬಸವನು ಗುರುವಾದುದ್ದನ್ನು ನೋಡಿದರೆ ಪ್ರಾಚೀನ ಶೈವಪಂಥದ ಆಚರಣೆಗಳನ್ನು ಪರಿಷ್ಕರಿಸುವ ಪ್ರಯತ್ನವನ್ನು ಗುರುಬಸವ ಮಾಡಿದ್ದಾನೆ ಎನಿಸುತ್ತದೆ. ಆದರೆ 12ನೇ ಶತಮಾನದ ವೀರಶೈವ ಚಳವಳಿ ಕಂಡುಕೊಂಡ ತಾತ್ವಿಕತೆಯನ್ನು 15–16ನೇ ಶತಮಾನದಲ್ಲಿ ಪರಿಸ್ಥಿತಿಗೆ ಅನುಗುಣವಾಗಿ ಆಚರಣೆಗಳು ತರಲು ಪ್ರಯತ್ನಿಸಿದ್ದಾನೆ ಎನ್ನುತ್ತದೆ. ಇದಕ್ಕೆ ಆಧಾರವಾಗಿ ಈಗಿರುವ ವೀರಭದ್ರ ಗುಡಿಯ ಮುಂದಿರುವ ಗುರುಬಸವನ ಗರ್ಭಗುಡಿಯ ಕೊಟ್ಟೂರಿನ ಎಲ್ಲಾ ಆಚರಣೆಗಳಿಗೆ ಕೇಂದ್ರ ಸ್ಥಳವಾಗಿ ಇಲ್ಲಿ ಸ್ಥಾವರಲಿಂಗ ಪೂಜೆಯಾಗಲೀ, ವಿಗ್ರಹ ಆರಾಧನೆಯಾಗಲೀ ಇಲ್ಲ. ವಿಭೂತಿಗಟ್ಟಿಯೇ ಇಲ್ಲಿಯ ಸಕಾರ ಪೂಜಾ ವಸ್ತು. ವೀರಶೈವ ಅಷ್ಟವರ್ಣ ಮೂರ್ತಿಯಿದ್ದು, ಇದಕ್ಕೆ ಪೂಜೆ ಸಲ್ಲುತ್ತದೆ." (ಸತೀಶ್ ಪಾಟೀಲ್, 2004:98)

ಹೀಗೆ ವೀರಭದ್ರನ ನೆನಪಿಗೋಸ್ಕರ ಕಾರ್ತಿಕೋತ್ಸವದಂತಹ ಸಂದರ್ಭದಲ್ಲಿ ಕೊಟ್ಟೂರಿನ ಗಚ್ಚಿನಮಠ (ಜೀವಂತ ಸಮಾಧಿ) ದಲ್ಲಿ ಗುರುಬಸವನ ಉತ್ಸವ ಮೂರ್ತಿ ಬಂದಾಗ ವೀರಭದ್ರ ದೇವರ ಒಡಪುಗಳನ್ನು ಹೇಳಲಾಗುತ್ತದೆ. ಈ ಒಡಪು ಹೇಳಲು ಸುತ್ತ ಮುತ್ತಲಿನ ಹಳ್ಳಿಗಳಿಂದ ಜನರು ಬರುತ್ತಾರೆ. ರಾತ್ರಿ ಉತ್ಸವ ಮೂರ್ತಿ ಬರುತ್ತಿದ್ದಂತೆ ರಾತ್ರಿ 1 ರಿಂದ 2 ಗಂಟೆಯಾಗುತ್ತದೆ. ಒಡಪು ಆರಂಭವಾಗಿ 3 ರಿಂದ 4 ತಾಸು ಒಬ್ಬೊಬ್ಬರು ಸವಾಲಿನ ರೂಪದಲ್ಲಿ ಆವೇಶದಿಂದ ಹೇಳುತ್ತಾರೆ.

ಕೊಟ್ಟೂರೇಶ್ವರ ಮೊದಲು ಈ ಮಠಕ್ಕೆ ಬಂದು ವೀರಭದ್ರನನ್ನು ಒಂದು ರಾತ್ರಿ ಉಳಿದುಕೊಳ್ಳುವುದಕ್ಕೆ ಜಾಗ ಕೇಳುತ್ತಾರೆ. ವೀರಭದ್ರನು ಇದಕ್ಕೆ ಒಪ್ಪಿಕೊಂಡು ಸ್ವಲ್ಪ ಒಂದು ಮೂಲೆಯಲ್ಲಿ ಕೊಟ್ಟೂರೇಶ್ವರನಿಗೆ ಜೋಳಿಗೆ ಬೆತ್ತವನ್ನು ಇಡಲು ನಿಂತರು. ಬೆಳಗ್ಗೆ ಸೂರ್ಯ ಉದಯ ಆಗುವಷ್ಟರಲ್ಲಿ ಇಡೀ ಮಠದ ತುಂಬೆಲ್ಲಾ ಬೆತ್ತ ಹಾಗೂ ಜೋಳಿಗೆಗಳು ತುಂಬಿಕೊಂಡವು. ನಂತರ ದಿನದಿಂದ ದಿನಕ್ಕೆ ಮೂಲ

ವೀರಭದ್ರನ ಮಠ ಕೊಟ್ಟೂರೇಶ ಇವರ ಸನ್ನಿಧಾನವಾಗಿ ಪರಿವರ್ತನೆ ಆಗತೊಡಗಿತು. ಇವರ ನಡುವಳಿ ಪವಾಡದಿಂದ ಭಕ್ತರು ಹಾಗೂ ಜನರು ದೇವಾಲಯಕ್ಕೆ ಬರುವುದು ಹೆಚ್ಚಾಯಿತು. ಈ ಸಂಗತಿಯನ್ನು ಕಂಡು ವೀರಭದ್ರನು ನಾನು ಉಳಿಯಲು ಕೊಟ್ಟೆ, ನನಗಿಂತ ನಿನ್ನ ಆಚಾರ ಸಂಪ್ರದಾಯ ಹೆಚ್ಚಾಯಿತಲ್ಲ ಎಂದು ಕೇಳಿದರಂತೆ. ಅದಕ್ಕೆ ಕೊಟ್ಟೂರೇಶ್ವರರು ಇಲ್ಲಿಗಿಂತ ನಾನು ನಿನಗೆ ಒಂದು ಬೆತ್ತವನ್ನು ಎಸೆಯುತ್ತೇನೆ. ಅದು ಎಲ್ಲಿ ಬೀಳುತ್ತದೋ ಅಲ್ಲಿ ನಿನಗೆ ಹೆಚ್ಚಿನ ಪೂಜಾ ಸಂಪ್ರದಾಯ ನಡುವಳಿಗಳು ನಡೆಯುತ್ತವೆ ಎಂದು ನುಡಿದರು.

ಅದರಂತೆ ಜಗಳೂರು ತಾಲೂಕು, ಕೊಡದ ಗುಡ್ಡದಲ್ಲಿ ವೀರಭದ್ರೇಶ್ವರ ನೆಲೆ ನಿಂತರು. ಈ ಗುಡ್ಡಕ್ಕೆ ಕೊಟ್ಟೂರೇಶ್ವರ ಕೊಟ್ಟ ಗುಡ್ಡವೇ ಕೊಡದ ಗುಡ್ಡ ಎಂಬ ನಂಬಿಕೆ ಪ್ರತೀತಿಯು ಇದೆ ಎಂಬುವುದು ಸ್ಥಳೀಯ ವರ್ಕ್ತ್ಯಗಳ ಅಭಿಪ್ರಾಯವಾಗಿದೆ. ಮಠದಲ್ಲಿ ಮೂಲ ವೀರಭದ್ರ ದೇವಾಲಯದ ಗುಡಿಯೊಳಗೆ ವೀರಭದ್ರನನ್ನು ನೋಡಿದರೆ ಇಲ್ಲಿ ಇರುವಂತಹ ವೀರಭದ್ರೇಶ್ವರ ಮೂರ್ತಿಗೂ ಕೊಡದ ಗುಡ್ಡದಲ್ಲಿರುವ ಮೂರ್ತಿಯೂ ಒಂದೇ ರೀತಿ ಆಕೃತಿ ಹೊಂದಿದೆ ಎಂಬುದು ಕಂಡುಬರುತ್ತದೆ.

ಪ್ರತಿಯೊಂದು ಮಠದಲ್ಲಿ ದೇವರ ಮೂರ್ತಿಯು ಗರ್ಭಗುಡಿಯ ದೇವಾಲಯದೊಳಗೆ ಕಾಣಸಿಗುತ್ತದೆ. ಆದರೆ  ಹಿರೇಮಠದಲ್ಲಿ ಕೊಟ್ಟೂರೇಶ್ವರ ದೇವಾಲಯದ ಮುಂಭಾಗದಲ್ಲಿ ಕಾಣುತ್ತೇವೆ.(ಇಲ್ಲಿ ದೇವರು ಕೊಟ್ಟೂರೇಶ್ವರ) ವೀರಭದ್ರನ ಗುಡಿಯ ಹೊಸಿಲಿನ ಮುಂದೆ ಕುಳಿತುಕೊಂಡಿರುವುದು ಕಾಣುತ್ತದೆ. ಹಾಗೂ ಎಲ್ಲ ದೇವಾಲಯದಲ್ಲಿ ಗೋಪುರ ದೇವಾಲಯದ ಗರ್ಭಗುಡಿಯ ಮೇಲೆ ಇರುವುದನ್ನು ಕಾಣುತ್ತೇವೆ. ಆದರೆ  ಹಿರೇಮಠದಲ್ಲಿ ದೇವಾಲಯದ ಒಳ ಆವರಣದಲ್ಲಿ ಇರುವುದು ಕಂಡುಬರುತ್ತದೆ.  ಗೋಪುರವನ್ನು ಹರಪನಹಳ್ಳಿಯ ಅರಸನು ಕಟ್ಟಿಸಿದನೆಂದು ಮಠದ ಅರ್ಚಕರಿಂದ ತಿಳಿಯುತ್ತದೆ. ಹಾಗೂ ದೇವಾಲಯದಲ್ಲಿ ಸುಂದರವಾದ ಕಲ್ಲಿನಿಂದ ಕೆತ್ತಿದ ಕಂಬವನ್ನು ಕಾಣುತ್ತೇವೆ. ಮತ್ತು  ಹಿರೇಮಠದ ಮುಖ್ಯದ್ವಾರವನ್ನು ಬಹಳ ಸುಂದರವಾದ ಹಾಗೂ ವಿಶೇಷವಾದ ಆಕರ್ಷಣೆಯಿಂದ ನಿರ್ಮಾಣ ಮಾಡಿದ್ದಾರೆ ಎಂಬುದು ತಿಳಿಯುತ್ತದೆ. ಮಠದಲ್ಲಿ ಕೊಟ್ಟೂರೇಶ್ವರರು ತತ್ವೋಪದೇಶ ನೀಡಿದ ಮಠ, ಅದಕ್ಕೆ ದರ್ಬಾರು ಮಠ ಎಂದು ಕರೆಯುತ್ತಾರೆ. ಇಲ್ಲಿ ಕೊಟ್ಟೂರಿನ ಕೊಟ್ಟೂರೇಶ್ವರ ಮಠಗಳಲ್ಲಿ ಅತಿ ಹೆಚ್ಚು ನಿಯಮ ಪಾಲನೆ ಹಾಗೂ ಸಂಪ್ರದಾಯಿಕ ನಡುವಳಿ ನಡೆಯುವುದು ಈ ಮಠದಲ್ಲಿ ಎಂಬುದು ವಕ್ತೃಗಳಿಂದ ಸಿಗುವಂತಹ ಮಾಹಿತಿಯಾಗಿದೆ.

ದೇವಾಲಯದ ಒಳಗೆ ಇರುವ ಕಂಬಗಳ ಕೆತ್ತನೆ ಅನೇಕ ಬಸವ ಮತ್ತು ಶಿವಲಿಂಗ, ಆಂಜನೇಯ, ಮಾರ್ಕಂಡೇಶ್ವರ ಮತ್ತು ಅನೇಕ ದೇವರ ವಿಗ್ರಹಗಳ ಮೂರ್ತಿಗಳ ಕೆತ್ತನೆಗಳು ಇರುವುದನ್ನು ಕಾಣುತ್ತೇವೆ. 16ನೇ ಶತಮಾನದ ಅಕ್ಬರ್ ನೀಡಿದ ಎಂದು ಹೇಳಲಾದ ಖಡ್ಗವನ್ನು  ಮಠದಲ್ಲಿ ಕಂಡುಬರುತ್ತದೆ. ಈ ಖಡ್ಗ 4 ಅಡಿ ಉದ್ದವಿದ್ದು, ಕಂಚು ಮತ್ತು ಪಂಚಲೋಹ ಮಿಶ್ರಿತವಾದ ಖಡ್ಗವಾಗಿದೆ.  ಖಡ್ಗವು ಅತಿ ಹೆಚ್ಚು ಚೂಪಾಗಿದೆ. ಹಾಗೂ ಖಡ್ಗದ ಹಿಡಿಕೆಯಲ್ಲಿ ಒಂದು ಚೂಪಾದ ಬಾಕು ಮತ್ತು ಸಿಂಹದ ಗುರುತು ಕಾಣುತ್ತದೆ. ಈ ಖಡ್ಗವು ಝಳಕುತ್ತದೆ ಎಂಬುದು ಕಂಡು ಬರುತ್ತದೆ.  ಖಡ್ಗವನ್ನು ಅಕ್ಬರ್ ಬಾದಷಹ ನೀಡಿದ್ದಾರೆ ಎಂಬುದನ್ನು ಸ್ಥಳೀಯ ವರ್ಕ್ತ್ಯಗಳಿಂದ ಸಿಗುವಂತಹ ಮಾಹಿತಿಯಾಗಿದೆ. ಅನೇಕ ಪುಸ್ತಕಗಳಲ್ಲಿ ಖಡ್ಗ ಅಕ್ಬರ್ ರಾಜ ನೀಡಿದ್ದಾನೆ ಎಂದು ಗುರುತಿಸಿದ್ದಾರೆ. ಆದರೆ ಎಲ್ಲಿಯೂ ಶಾಸನ ದಾಖಲೆಗಳಲ್ಲಿ

ಇಲ್ಲದೇ ಇರುವುದು ಗಮನಾರ್ಹವಾದ ಸಂಗತಿಯಾಗಿದೆ. ಹಿರೇಮಠ ಮೂಲ ವೀರಭದ್ರ ಸ್ವಾಮಿಯ ಮಠವಾಗಿರುವುದರಿಂದ ಖಡ್ಗ ವೀರಭದ್ರ ಸ್ವಾಮಿಗೆ ಸೇರಿರಬಹುದೇನೋ ಎಂದು ಭಾವಿಸಬಹುದು. ಹಾಗೆಯೇ ಮಠದಲ್ಲಿ ಅನೇಕ ಸಾವಿರಾರು ಜನ ಭಕ್ತರನ್ನು ದಿನಾಲು ಬರುತ್ತಾರೆ. ಮೂರು ದಿಕ್ಕಿನಲ್ಲಿ ದ್ವಾರ ಬಾಗಿಲುಗಳು ಇವೆ. ಪೂರ್ವಕ್ಕೆ, ಉತ್ತರಕ್ಕೆ ಹಾಗೂ ದಕ್ಷಿಣವಾಗಿ ಮೂರು ದ್ವಾರ ಬಾಗಿಲುಗಳು ಇರುವುದನ್ನು ಕಾಣುತ್ತೇವೆ. ಅದರಂತೆ ದೇವಾಲಯದ ಹಿಂಭಾಗದಲ್ಲಿ 40 ಕೊಠಡಿವುಳ್ಳ ಗೃಹವಸತಿಗಳನ್ನು ಕಾಣುತ್ತೇವೆ. ಕಲ್ಯಾಣ ಮಂಟಪವೂ ಇದೆ. ಮದುವೆ ಕಾರ್ಯಕ್ರಮಗಳು ಮಠದಲ್ಲಿ ಜರುಗುತ್ತವೆ ದೇವಾಲಯದ ಎದುರುಗಡೆ ಬೆಳ್ಳಿ ರಥೋತ್ಸವದ ತೇರನ್ನು ನಿರ್ಮಿಸಿರುವಂತಹ ಸಣ್ಣ ಮನೆಯನ್ನು ಸಹ ಇಲ್ಲಿ ಕಾಣುತ್ತೇವೆ ಮತ್ತು ಧಾರ್ಮಿಕವಾಗಿ ಹಿರೇಮಠ ಅತಿ ಹೆಚ್ಚು ಭಕ್ತಿ ಪವಾಡಗಳ ಸ್ಥಳವಾಗಿದೆ ಎಂದು ಸ್ಥಳೀಯ ವಕ್ತೃಗಳಿಂದ ಸಿಗುವಂತಹ ಮಾಹಿತಿಯಾಗಿದೆ. ಈ ಮಠದಲ್ಲಿ ಪ್ರತಿನಿತ್ಯವೂ ಅನ್ನದಾಸೋಹ ಮಾಡುತ್ತಾರೆ. ಹಾಗೂ ಬೆಳ್ಳಿ ರಥದಲ್ಲಿ ಎಳೆಯುವ ನಾಗದೇವತೆ, ಆನೆ, ಬಸವ, ನವಿಲುಗಳ ಉತ್ಸವ ಮೂರ್ತಿಗಳನ್ನು ಈ ಮಠದಲ್ಲಿಟ್ಟಿರುವುದು ಕಂಡು ಬರುತ್ತದೆ. ಹಾಗೆಯೇ ಈ ಮಠಕ್ಕೆ ತನ್ನದೇ ಆದ ಕ್ರಿಯಾವಿಧಾನದಿಂದ ನಿತ್ಯ ಸಂಪ್ರದಾಯಕ ಆಚರಣೆ ನಡೆಯುತ್ತದೆ. ಪ್ರತಿ ಗುರುವಾರ, ಸೋಮವಾರ ಅಕ್ಬರ್ ಕೊಟ್ಟನೆಂದು ಹೇಳಲಾಗುವ ಖಡ್ಗವನ್ನು ರಾತ್ರಿ ದೇವರ ಕೊನೆಯ ಪೂಜೆಯ ಸಮಯದಲ್ಲಿ 10 ಗಂಟೆಗೆ 108 ದೀಪಗಳನ್ನು ಹಚ್ಚಿ ಎರಡೂ ಕೈಗಳಿಂದ ಖಡ್ಗವನ್ನು ಹಿಡಿದು ಕೊಟ್ಟೂರೇಶ್ವರನ ಮುಂದೆ ಹಿಡಿದು ಪೂಜೆ ಮಾಡುತ್ತಾರೆ. ಈ ಒಂದು ಸಂಪ್ರದಾಯ ಸುಮಾರು ವರ್ಷಗಳಿಂದ ನಡೆದುಕೊಂಡು ಬರುತ್ತಲೇ ಇದೆ ಎಂದು ಮಠದ ಅರ್ಚಕರಿಂದ ತಿಳಿಯುತ್ತದೆ. ಹೀಗೆ ವಿಶೇಷವಾದ ಪೂಜೆ ಪುನಸ್ಕಾರಗಳು ಹಿರೇಮಠದಲ್ಲಿ ಮಾತ್ರ ನೆರವೇರುತ್ತವೆ. ಮಠದ ಒಳಗೆ ಎರಡು ಅಂಕಣದಷ್ಟು ಜಾಗ ಇದೆ. ಒಂದು ಮೂಲ ವೀರಭದ್ರೇಶ್ವರ ದೇವಾಲಯದ ಗರ್ಭ ಗುಡಿಯನ್ನು ಕಾಣುತ್ತೇವೆ. ನಂತರ ಮುಂದೆ ಕುಳಿತ ಕೊಟ್ಟೂರೇಶ್ವರ ದೇವಾಲಯದ ಅಂಕಣವು ಇದೆ. ಹರಪನಹಳ್ಳಿಯ ಸೋಮಶೇಖರ ರಾಜ ಅಂಕಣವನ್ನು ಕಟ್ಟಿಸಿದ್ದಾನೆ ಎಂಬುದು ತಿಳಿಯುತ್ತದೆ. ಮಠವು ಸಂಪೂರ್ಣ ಕಲ್ಲಿನ ಕೆತ್ತನೆ ಹಾಗೂ ಈ ಕೆತ್ತನೆ ಜಕಣಾಚಾರಿಯವರ ಕೆತ್ತನೆ ಎಂಬುದು ಹಿರೇಮಠದ ಪೂಜಾ ಅರ್ಚಕರಿಂದ ತಿಳಿದುಬರುತ್ತದೆ. ದೇವಾಲಯದ ಗೋಪುರ ಕಳಸದ ಹತ್ತಿರ ಕೆಳಗಡೆ ಸುಂದರವಾದ 6 ಸಿಂಹದ ಮೂರ್ತಿಗಳನ್ನು ಕೆತ್ತಿದ್ದಾರೆ. ಹೀಗೆ ಅನೇಕ ರೀತಿಯ ದೇವಾಲಯದ ಒಳಗೂ ಹೊರಗೂ ಸುಂದರವಾದ ಆಕರ್ಷಣೆಯ ಕೆತ್ತನೆಗಳು ಇರುವುದು ಕಂಡುಬರುತ್ತದೆ. ಹಿರೇಮಠದಲ್ಲಿ ಒಳಗಡೆ ಗೋಪುರದ ಕೆಳಗೆ ನಿಂತು ಭಕ್ತರು ಕೇಳಿದರೆ ಕೇಳಿದ ವರ ನೀಡುತ್ತಾರೆ ಎಂಬ ನಂಬಿಕೆ ಇದೆ ಎಂಬುವುದು ದೇವಾಲಯದ ವಕ್ತೃಗಳಿಂದ ಸಿಗುವಂತಹ ಮಾಹಿತಿಯಾಗಿದೆ.[1]

ಹೆಸರೇ ಸೂಚಿಸುವಂತೆ ಹಿರೇಮಠ ಎಂದರೆ ದೊಡ್ಡ ಮಠ, ದರ್ಬಾರು ಮಠ ಎಂದು ತಿಳಿಯುತ್ತದೆ. ಮಠದಲ್ಲಿ ಅತಿ ಹೆಚ್ಚು ಜನ ಬಂದು ಹೋಗುವುದು ಇದೆ. ಶಬ್ದ, ಸಡಗರ, ಗಲಭೆಯಿಂದ ಕೂಡಿರುತ್ತದೆ. ಈ ಮಠದಿಂದ ಮುಂದೆ ಗಚ್ಚಿನಮಠಕ್ಕೆ ಹೋದರೆ ಹಿರೇಮಠದಲ್ಲಿ ಬಂದು ಹೋದ ಅನುಭವ ಗಚ್ಚಿನಮಠದಲ್ಲಿ ಸಿಗುತ್ತದೆ. ಇದು ಶಾಂತಿ, ನೆಮ್ಮದಿಯನ್ನು ಆಶೀರ್ವದಿಸುವಂತ ಮಠವಾಗಿರುತ್ತದೆ. ಬಹಳ ನಿಶ್ಯಬ್ದವನ್ನು

[1] ವಕ್ತೃಗಳು: ಟಿ.ನಾಗರಾಜ ಮತ್ತು ಎ.ಅಣ್ಣಯ್ಯ, ಕೊಟ್ಟೂರು

ಗಚ್ಚಿನಮಠದಲ್ಲಿ ಕಾಣುತ್ತೇವೆ. ಇದಕ್ಕೆ ಹಿರೇಮಠವನ್ನು ದರ್ಬಾರು ಮಠ, ಉಪದೇಶ ನೀಡುವ ಮಠ, ಹೀಗೆ ಹೆಸರುಗಳಿಂದ ಕರೆಯುತ್ತಾರೆ.

ಕೊಟ್ಟೂರಿನಲ್ಲಿ ಕೊಟ್ಟೂರೇಶ್ವರರ 5 ಮಠಗಳನ್ನು ಕಾಣುತ್ತೇವೆ. ಅದರಲ್ಲಿ ಈ ಹಿರೇಮಠವನ್ನು ಮಾತ್ರ ಸರ್ಕಾರವು ವಶಪಡಿಸಿಕೊಂಡಿದೆ ಎಂಬುದು ತಿಳಿಯುತ್ತದೆ. ಮುಜರಾಯಿ ಇಲಾಖೆಯಿಂದ ಕಾರ್ಯ ನಡೆಯುತ್ತದೆ. ಮಠದ ಕಾಣಿಕೆಯನ್ನು ವರ್ಷಕ್ಕೆ 3 ಬಾರಿ ತೆಗೆಯಲಾಗುತ್ತದೆ ಎಂಬುದು ಅರ್ಚಕರಿಂದ ತಿಳಿಯುತ್ತದೆ.  ಮಠದ ಆದಾಯ ಸುಮಾರು ವರ್ಷಕ್ಕೆ ಒಂದು ಕೋಟಿ ಇರುವುದು ತಿಳಿಯುತ್ತದೆ. ಈ ಮಠದ ಒಂದು ವಿಶೇಷವಾದ ಆಚರಣೆ ಎಂದರೆ ಎಲ್ಲಾ ಮಠದಲ್ಲಿಯೂ ಎಲ್ಲಾ ಧರ್ಮದವರು ಬರುವುದನ್ನು ಕಾಣುತ್ತೇವೆ. ಆದರೆ ಈ ಮಠಕ್ಕೆ ಮುಸ್ಲಿಂ ಸಮುದಾಯದವರು ಸ್ವಲ್ಪ ಹೆಚ್ಚಿನ ಭಕ್ತರು ಬರುವುದು ತಿಳಿಯುತ್ತದೆ. ಹಾಗೂ ದಸರಾ, ಮೊಹರಂ ಹಬ್ಬಗಳಲ್ಲಿಯೂ ವಿಶೇಷವಾದ ಪೂಜೆ, ಪುನಸ್ಕಾರಗಳು ನಡೆಯುತ್ತವೆ. ಮೊಹರಂ ಹಬ್ಬದಲ್ಲಿ ಪಕ್ಕೀರಸ್ವಾಮಿ ದೇವರನ್ನು ತೆಗೆದುಕೊಂಡು ಹೋಗುವಾಗ ಹಿರೇಮಠದ ಮುಂದೆ ನಿಂತು ಮಂಗಳಾರತಿ ಬೆಳಗಿಸಿಕೊಂಡು ಮುಂದೆ ಸಾಗುತ್ತದೆ. ಈ ಮಠದಲ್ಲಿ ಮಾತ್ರ ಬೆಳ್ಳಿಯ ಪಲ್ಲಕ್ಕಿ ಇರುವುದು.

ಪೂಜಾ ಪುನಸ್ಕಾರಗಳ ಸಮಯವೆಂದರೆ ಪ್ರತಿನಿತ್ಯ 5 ಹೊತ್ತು ಪೂಜೆ ನಡೆಯುತ್ತದೆ. ಮೊದಲನೇ ಪೂಜೆ ಬೆಳಿಗ್ಗೆ 4–00 ಗಂಟೆಗೆ ಸುಪ್ರಭಾತದೊಂದಿಗೆ ಶ್ರೀ ಸ್ವಾಮಿಯನ್ನು ಎಬ್ಬಿಸಿ ಅಭಿಷೇಕ, ಪೂಜೆ ಕ್ರಿಯೆ ಪ್ರಾರಂಭವಾಗುತ್ತದೆ. ನಂತರ ಶ್ರೀ ಸ್ವಾಮಿಯ ದರ್ಶನ ವ್ಯವಸ್ಥೆ ಕಲ್ಪಿಸಲಾಗುವುದು. ಎರಡನೇ ಪೂಜೆ ಮಧ್ಯಾಹ್ನ 12–00 ಗಂಟೆಗೆ ಅಭಿಷೇಕ ಪೂಜೆ ಕ್ರಿಯೆ ನಡೆಯುತ್ತದೆ. ಮೂರನೇ ಪೂಜೆ ಮಧ್ಯಾಹ್ನ 3–30 ಕ್ಕೆ ಅರ್ಧ ತೆರೆದ ಬಾಗಿಲು ಮುಚ್ಚಿ ನಡೆಯುತ್ತದೆ. 4ನೇ ಪೂಜೆ ಸಂಜೆ 6–00 ಗಂಟೆಗೆ ದೀಪಾರಾಧನೆ ಪೂಜೆ ನಡೆಯುತ್ತದೆ. 5ನೇ ಪೂಜೆ ರಾತ್ರಿ 9–15 ಗಂಟೆಗೆ ಮತ್ತೆ ಅಭಿಷೇಕ ಕ್ರಿಯೆ ಪ್ರಸಾದ ಪೂಜೆ ರಾತ್ರಿ 10–00 ಕ್ಕೆ ಬಾಗಿಲು ಹಾಕುತ್ತಾರೆ. ಶ್ರೀ ಗುರುವನ್ನು ಮಂಚದ ಮೇಲೆ ಮಲಗಿಸುತ್ತಾರೆ.

ಪ್ರತಿ ಸೋಮವಾರ, ಗುರುವಾರ ರಾತ್ರಿ 10–00ಕ್ಕೆ ಕೈ ಮಹಾ ದೀಪಾರಾಧನೆ ಮಂಗಳಾರತಿ ಇರುತ್ತದೆ. ಕಾರ್ತೀಕ ಹಾಗೂ ಮಾರ್ಗಶಿರ ಮಾಸದಲ್ಲಿ ಬರುವಂತಹ ಸೋಮವಾರ ಮತ್ತು ಗುರುವಾರದ ದಿನಗಳಲ್ಲಿ ಉತ್ಸವ ನಡೆಯುತ್ತದೆ. ಕೊನೆಯ ಕಾರ್ತೀಕೋತ್ಸವ ದಿನ ಲಕ್ಷದೀಪೋತ್ಸವ ಮತ್ತು ರಥೋತ್ಸವ ಇರುತ್ತದೆ. ಮಾಘ ಮಾಸ ಕೃಷ್ಣಪಕ್ಷ ದಶಮಿ ತಿಥಿಯ ದಿನ ಮೂಲ ನಕ್ಷತ್ರದ ಸಮಯದಲ್ಲಿ ಶ್ರೀ ಗುರು ಕೊಟ್ಟೂರೇಶ್ವರ ಮಹಾ ರಥೋತ್ಸವ ನಡೆಯುತ್ತದೆ. ಹಾಗೂ ಈ ಕೊಟ್ರೇಶ ಅವರ ಮನೆಯ ದೇವರು ಇರುವವರು ಇವತ್ತಿಗೂ ಮಂಚದ ಮೇಲೆ ಮಲಗುವುದಿಲ್ಲ ಎಂಬುದು ವಕ್ತೃಗಳಿಂದ ತಿಳಿಯುತ್ತದೆ. ಒಂದು ವೇಳೆ ಮಲಗಿದರೂ ತಪ್ಪು ದಂಡವನ್ನು ಸಲ್ಲಿಸುತ್ತಾರೆಂದು ತಿಳಿಯುತ್ತದೆ.

ಕೊಟ್ಟೂರಿನಲ್ಲಿ ವೀರಶೈವ ಧರ್ಮದವರೇ ಅತೀ ಹೆಚ್ಚು ಕಾಣುವುದರಿಂದ ಮತ್ತು ಸುತ್ತ ಮುತ್ತ ಹಳ್ಳಿಗಳಿಂದಲೂ  ದೇವರಿಗೆ ನಡೆದುಕೊಳ್ಳುತ್ತಾರೆ.

**ಗಚ್ಚಿನಮಠ**

ಗಚ್ಚಿನ ಮಠವನ್ನು ಕೊಟ್ಟೂರುಸ್ವಾಮಿಯ ಜೀವಂತ ಸಮಾಧಿ ಮಠ ಎಂದು ಕರೆಯುತ್ತಾರೆ. ಒಬ್ಬ ಸಂತರಿಗೆ ಸಂಬಂಧಿಸಿದಂತೆ ಇಲ್ಲಿಯೂ ಕೂಡಾ ಒಂದೇ ಊರಿನಲ್ಲಿ 5 ಮಠಗಳು ಕಾಣಲು ಸಿಗುವುದಿಲ್ಲ. ಆದರೆ ಕೊಟ್ಟೂರಿನಲ್ಲಿ ಕೊಟ್ಟೂರೇಶ್ವರರಿಗೆ ಸಂಬಂಧಿಸಿದ 5 ಮಠಗಳಿವೆ. ಅವುಗಳು ಹಿರೇಮಠ, ತೊಟ್ಟಿಲುಮಠ, ಮೂರ್ಕಲ್ ಮಠ, ಮರಿಕೊಟ್ರೇಶ್ವರ ಮಠ ಹಾಗೂ ಗಚ್ಚಿನಮಠ. ಈ ಮಠದಲ್ಲಿಯೇ ಕೊಟ್ಟೂರೇಶ್ವರರು ಜೀವಂತ ಸಮಾಧಿಯಾಗಿದ್ದಾರೆ ಎಂಬುದು ತಿಳಿಯುತ್ತದೆ. ಈ ಮಠದ ಬಗ್ಗೆ ವಿದ್ವಾಂಸರ ಉಲ್ಲೇಖ ಈ ರೀತಿ ಕಂಡುಬರುತ್ತದೆ.

“ಸಾಮಾನ್ಯರು ಸತ್ತರೆ ಅವರನ್ನು ಮಣ್ಣಿನಲ್ಲಿ ಹೂತು ಅದಕ್ಕೆ ಸಮಾಧಿ ಎಂದು ಕರೆಯುತ್ತಾರೆ. ಶರಣರು ಅಮರತ್ವ ಹೊಂದಿದಾಗ ಅವರನ್ನು ಬಯಲಿನೊಳಗೆ ಬಯಲಾದವರೆಂದು ಹೇಳಿ ಸಮಾಧಿಯನ್ನು ಮಾಡಿ ಅದಕ್ಕೆ ಗದ್ದುಗೆ ಎಂದು ಕರೆಯುತ್ತಾರೆ. ಕರ್ನಾಟಕದಲ್ಲಿ ಇಂತಹ ಗದ್ದುಗೆಗಳು ತಮ್ಮದೇ ಆದ ವಿಶಿಷ್ಟ ಪರಂಪರೆಯನ್ನು ಹೊಂದಿವೆ. ಗರ್ದುಗೆ, ಗದ್ದಿಗೆ, ಗದಿಗೆ ಎಂದರೆ ಪುಟಾವಾಣಿ ಸಂವಾಸನ ಪೀಠ ಗುರುಗಳ ಸಮಾಧಿಯ ಮೇಲೆ ಒಂದು ಕಲ್ಲು ಚಪ್ಪಡಿ ಹಾಸಿ ಅದರ ಮೇಲೆ ಒಂದು ಕಂಬವನ್ನು ಸ್ಥಾಪಿಸುವುದು ಎಂದು ಅರ್ಥ. ಹೊರನೋಟಕ್ಕೆ ಗದ್ದಿಗೆ ಹಲವಾರು ರೀತಿಯಲ್ಲಿ ಕಾಣುತ್ತದೆ. ಶರಣರು ಶಿವೈಕ್ಯ ಆದ ಮೇಲೆ ಸಮಾಧಿಯನ್ನು ತೋಡಿ ಸಂಸ್ಕಾರ ಮಾಡಿ ಒಂದು ಕಲ್ಲು ಚಪ್ಪಡಿಯಿಂದ ಸಮಾಧಿಯ ಮೇಲೆ ಮುಚ್ಚಲಾಗುತ್ತದೆ. ಕಾಲಕ್ರಮೇಣ ಅದರ ಮೇಲೆ ಲಿಂಗವನ್ನು ಪ್ರತಿಷ್ಠಾಪನೆ ಮಾಡಿ ಶರಣರು ಲಿಂಗೈಕ್ಯರಾದರು, ಲಿಂಗ ಸ್ವರೂಪ ತಾಳಿದರು ಎಂದು ಭಾವಿಸಲಾಗುತ್ತದೆ. ಗದ್ದುಗೆಗಳಲ್ಲಿ ಹಲವಾರು ವಿಧಗಳುಂಟು. ಅವುಗಳೆಂದರೆ, ತೋರುಗದ್ದುಗೆ, ಉಂಗದ್ದುಗೆ, ಜಲಗದ್ದುಗೆ ಇದು ಶರಣರು ಕುಳಿತುಕೊಳ್ಳುವ ಪವಿತ್ರ ಸ್ಥಳ. ಶರಣರು ಆ ಸ್ಥಳದಲ್ಲಿ ಕುಳಿತುಕೊಳ್ಳುವುದಕ್ಕೆ ಮೊದಲು ಭತ್ತ ಅಥವಾ ಜೀರಿಗೆಯನ್ನು ಆ ಗದ್ದುಗೆಯ ಮೇಲೆ ಹಾಕಿದರೆ ಹರಳುಗಳಾಗಿ ಮಾರ್ಪಡುತ್ತಿದ್ದವು. ಆಮೇಲೆ ಗುರುಗಳು ಆ ಗದ್ದುಗೆಯ ಮೇಲೆ ಕುಳಿತು ತಮ್ಮ ಗುರುಪೀಠದ ಕೆಲಸವನ್ನು ನಿರ್ವಹಿಸುವರು.

ಕರ್ನಾಟಕದಲ್ಲಿ ಮಂಟೆಸ್ವಾಮಿ, ಸಿದ್ದಪ್ಪಾಜಿ ಗದ್ದುಗೆಗಳು ಈ ತರಹದ್ದು. ಕೆಲವು ಶರಣರು ಜಲಸಮಾಧಿ ಹೊಂದುವುದುಂಟು. ರಾಚಪ್ಪಾಜಿ ಎಂಬ ಶರಣ ಪಾತಾಳ ಬಾವಿಯನ್ನು 11 ಅಡಿ ಆಳದಷ್ಟು ತೆಗೆದು ಐಕ್ಯವಾಗಿದ್ದರು. ಕೆಲವು ಶರಣರು ಹಲವು ಕಡೆ ದೇಶ ಪರ್ಯಟನೆ ಮಾಡಿ ಅಲ್ಲಲ್ಲಿ ತಪಸ್ಸು ಮಾಡಿ ಬಹುತೇಕ ಸ್ಥಳಗಳನ್ನು ಪಾವನಗೊಳಿಸಿದ್ದಾರೆ. ನಿರ್ಧಿಷ್ಟ ನೆಲೆಯಲ್ಲಿ ಐಕ್ಯರಾದ ಕೆಲವು ಶರಣರ ಗದ್ದುಗೆಗಳಲ್ಲಿ ಭಕ್ತಾಧಿಗಳು ಹೋಗುವುದು ಆಗದೇ ಇದ್ದಾಗ ಅವರು ತಪಸ್ಸು ಮಾಡಿದ, ಬಂದು ಹೋದ, ಕೆಲ ಸ್ಥಳಗಳಲ್ಲಿ ಕೃತಕ ಗದ್ದುಗೆ ನಿರ್ಮಿಸುವರು. ತೋರಿಕೆಗೆ ಗದ್ದಿಗೆಯಾಗಿ ಅರ್ಹರಾಗುತ್ತವೆ. ಮಾದೇಶ್ವರ, ಕೊಟ್ಟೂರೇಶ್ವರ, ತೋಟದ ಸಿದ್ದಲಿಂಗೇಶ್ವರರು ಮುಂತಾದ ತೋರು ಗದ್ದುಗೆಗಳನ್ನು ಹಲವಾರು ಊರುಗಳಲ್ಲಿ ಕಾಣಬಹುದು. ಮೂಲ ಗದ್ದಿಗೆಗಳಿಗೆ ಹೋಗಲು ಆಗದೇ ಇದ್ದಾಗ ಅವುಗಳಿಗೆ ಮಾನ್ಯತೆ ಹೆಚ್ಚು. ಹಾಗೂ ಪ್ರಮುಖ ಶರಣರ ಗದ್ದಿಗೆಗಳೆಂದರೆ ಕೊಟ್ಟೂರೇಶ್ವರರ ಗದ್ದುಗೆ, ಬಳ್ಳಾರಿ ಜಿಲ್ಲೆಯ ಕೊಟ್ಟೂರಿನಲ್ಲಿದ್ದು ಪ್ರತಿ ವರ್ಷ ಮೂಲ ನಕ್ಷತ್ರದಲ್ಲಿ ಲಕ್ಷಾಂತರ ಭಕ್ತರ ನಡುವೆ ರಥವನ್ನು ವಿಜೃಂಭಣೆಯಿಂದ ಎಳೆದು ಪುನೀತರಾಗುತ್ತಾರೆ. ಶರಣ

ಬಸವೇಶ್ವರ ಗದ್ದಿಗೆ ಗುಲ್ಬರ್ಗಾದಲ್ಲಿದೆ. ಅವರು ಆರಂಭಿಸಿದ ಅನ್ನದಾಸೋಹ ಇಂದಿಗೂ ನಡೆಯುತ್ತದೆ. ಅವರು ಹಚ್ಚಿದ ದೀಪ ಇಂದಿಗೂ ನಂದಾದೀಪವಾಗಿ ಬೆಳಗುತ್ತದೆ. ತುಮಕೂರು ಜಿಲ್ಲೆಯ ಅಗಳಿ ಗ್ರಾಮದ ಶರಣಬಸವೇಶ್ವರ ಗದ್ದಿಗೆ ಬಳ್ಳಾರಿ ಜಿಲ್ಲೆಯ ಕೂಡ್ಲಿಗಿ ತಾಲೂಕಿನ ಖಾನಾಮಡಗು ಗ್ರಾಮದಲ್ಲಿ ಇಲ್ಲಿಯೂ ನಿತ್ಯ ಅನ್ನ ದಾಸೋಹ ನಡೆಯುತ್ತದೆ. ಷಣ್ಮುಖಸ್ವಾಮಿ ಗದ್ದಿಗೆ ಗುಲ್ಬರ್ಗಾ ಜಿಲ್ಲೆಯ ಜೇವರ್ಗಿಯಲ್ಲಿದ್ದು, ಇವರು ಅಖಂಡೇಶ್ವರ ಅಂಕಿತದಲ್ಲಿ ವಚನಗಳನ್ನು ರಚಿಸಿದ ಶರಣರು. ತೋಟದ ಸಿದ್ದಲಿಂಗೇಶ್ವರ ಗದ್ದಿಗೆ ಎಡೆಯೂರು ಕ್ಷೇತ್ರದಲ್ಲಿದ್ದು ಭಕ್ತಾಧಿಗಳು ಇವರನ್ನು ದೇವರೆಂದು ಪೂಜಿಸಿ ಭಕ್ತಿಯಿಂದ ನಡೆದುಕೊಳ್ಳುತ್ತಾರೆ. ಎರ್ರಿತಾತನ ಗದ್ದಿಗೆಯು ಬಳ್ಳಾರಿ ಜಿಲ್ಲೆಯ ಚಳಗುರ್ಕಿಯಲ್ಲಿದೆ. ಇವರು ಬ್ರಿಟೀಷ್ ಸರ್ಕಾರದಲ್ಲಿದ್ದಾಗ ಸರ್ಕಾರಿ ವೃತ್ತಿಯಲ್ಲಿ ಇದ್ದವರು ಎಂಬ ಪ್ರತೀತಿಯೂ ಇದೆ" (ಬಸವರಾಜ ಇ ಎಂ: 9–5–2018:2)

ಹೀಗೆ ಸುಮಾರು 16ನೆಯ ಶತಮಾನದ ಹಿಂದಿನಿಂದಲೂ ಬಳಕೆಯಿಂದ ಕೂಡಿದೆ ಎಂದು ಸ್ಥಳೀಯ ವರ್ಕ್ತ್ಯಗಳಿಂದ ಸಿಗುವಂತಹ ಮಾಹಿತಿಯಾಗಿದೆ. ಗಚ್ಚಿನಮಠ  ಹೆಸರೇ ಸೂಚಿಸುವಂತೆ ಗಚ್ಚು ಎಂದರೆ ತಂಪು ಎಂದು ತಿಳಿಯುತ್ತದೆ. ಗಚ್ಚಿನಮಠದಲ್ಲಿ ಗುರು ಕೊಟ್ಟೂರೇಶ್ವರರು(ಗುರು ಬಸವರು) ಜೀವಂತ ಐಕ್ಯವಾದ ಮಠ ಎಂದು ಕಂಡುಬರುತ್ತದೆ. ಈ ಮಠದಲ್ಲಿ ಯಾವುದೇ ರೀತಿಯ ಪೂಜೆ ಸಂಪ್ರದಾಯಗಳು ನಡೆಯುವುದು ಬಹಳ ಮಡಿಯುಡಿಯಿಂದ ನಡೆಯುತ್ತದೆ. ಹಾಗೆ ಎಲ್ಲ ಮಠದಲ್ಲಿ ನಡೆಯುತ್ತದೆ. ಜಾಗೃತ ಮಠವಾಗಿರುವುದರಿಂದ ಸ್ವಾಮಿಯ ಕಾರ್ಯಗಳು ಬಹಳ ಎಚ್ಚರಿಕೆಯಿಂದ ನೆರವೇರಿಸುತ್ತಾರೆ.

ಎಲ್ಲ ಮಠಗಳಿಗಿಂತ ಈ ಮಠ ದೊಡ್ಡ ಮಠವಾಗಿದೆ.  ಮಠದಲ್ಲಿ ಸುಮಾರು 43 ಒಂದೇ ರೀತಿಯ ಕಂಬಗಳು ಕಂಡುಬರುತ್ತವೆ. ಹಾಗೂ ವಿಶೇಷವಾಗಿ ಕೊಟ್ಟೂರೇಶ್ವರರು ಜೀವಂತ ಸಮಾಧಿಯಾದ ಸ್ಥಳವಾಗಿರುವುದನ್ನು ಅಲ್ಲಿಯ ವಿಶೇಷವಾದ ರೀತಿಯ ಒಂದು ವಾತಾವರಣವು  ಮಠದಲ್ಲಿ ಸಿಗುತ್ತದೆ. ಸುಮಾರು ವರ್ಷಗಳಿಂದ ನೋಡುತ್ತಲೇ ಬೆಳೆದ ಸ್ಥಳೀಯ ವರ್ಕ್ತ್ಯಗಳಿಂದ ತಿಳಿದ ಮಾಹಿತಿಯಾಗಿದೆ. ಹಾಗೂ ಉಳಿದೆಲ್ಲಾ ಮಠದ ಮುಂದೆ ಯಾವುದೇ ರೀತಿಯ ಜಾಗ ಕಾಣಲು ಸಿಗುವುದಿಲ್ಲ. ಆದರೆ ಈ ಮಠದ ಮುಂದೆ ವಿಶಾಲವಾದ ಜಾಗವನ್ನು ಇರುವುದು ಕಂಡು ಬರುತ್ತದೆ.  ಮಠಕ್ಕೆ ಬರುವ ಭಕ್ತರು ಹೇಳುವಂತೆ ಸುಮಾರು 2–3 ತಾಸು ಇರುವಷ್ಟು ನೆಮ್ಮದಿ ಈ ಮಠದಲ್ಲಿ ಇದೆ ಎಂದು ನುಡಿಯುವರು ಎಂದು ಮಠದ ಅರ್ಚಕರಿಂದ ಸಿಗುವಂತಹ ಮಾಹಿತಿಯಾಗಿದೆ. ಹಾಗೆಯೇ  ಮಠ ಊರಿನ ಕೋಟೆಯ ಏರಿಯಾ ಎಂದು ಕರೆಯಿಸಿಕೊಳ್ಳುವ ಏರಿಯಾ(ಓಣಿಯಲ್ಲಿ) ಇದೆ. ಹಿರೇಮಠ ಹಾಗೂ ಗಚ್ಚಿನಮಠ, ತೊಟ್ಲುಮಠ  ಮೂರೂ ಮಠಗಳು ಇದೇ ಕೋಟೆಯ ಏರಿಯಾದ ಆವರಣದಲ್ಲಿ ಕಂಡುಬರುತ್ತವೆ. ಒಂದೊಂದು ಮಠದಿಂದ ಒಂದೊಂದು ಮಠಕ್ಕೆ ಸುಮಾರು 250 ರಿಂದ 300 ಮೀಟರ್‌ಗಳಷ್ಟು ಅಂತರ ಇದೆ. ಈ ಗಚ್ಚಿನಮಠದಲ್ಲಿ ಸ್ವಾಮಿಯ ರಥೋತ್ಸವಕ್ಕೆ ತರುವ ಏಣಿಯನ್ನು ಇಟ್ಟಿರುತ್ತಾರೆ.  ಮಠಕ್ಕೆ ವರ್ಷಕ್ಕೆ ಒಂದೇ ಬಾರಿ ಹರಿಜನ ಸಮುದಾಯದವರು ಒಳಗೆ ಬರುತ್ತಾರೆ. ಕಾರಣ ರಥೋತ್ಸವಕ್ಕೆ ಏಣಿ ತರುವ ಸಮಯದಲ್ಲಿ ಹಾಗೂ ಬಂದು ಹೋದ ಮೇಲೆ ದೇವಸ್ಥಾನವನ್ನು ಎಲ್ಲರೂ ತೊಳಿಯುತ್ತಾರೆ ಎಂಬುದು ಸ್ಥಳೀಯ ವಕ್ತೃಗಳಿಂದ ಸಿಗುವಂತಹ ಮಾಹಿತಿಯಾಗಿದೆ. ಹಾಗೂ ದೇವಾಲಯದ ಆವರಣದಲ್ಲಿ ಒಂದು

ಐತಿಹಾಸಿಕ ವಿಶೇಷವಾದ ಬಾವಿ ಇರುವುದು ಕಂಡುಬರುತ್ತದೆ. ಈ ಬಾವಿಯನ್ನು ಕಣ್ಣೀರಮ್ಮನ ಬಾವಿ ಎಂದು ಕರೆಯುತ್ತಾರೆ.

ದೇವಾಲಯದ ಒಳಗೆ ಬಹಳ ಸುಂದರವಾದ ಆಕರ್ಷಕವಾದ ರೀತಿಯ ಕಲ್ಲಿನಲ್ಲಿ ಅದು ಒರಟು ಕಲ್ಲುಗಳಿಂದ ಮೂರ್ತಿಗಳನ್ನು ಕೆತ್ತಿದ್ದಾರೆ. ಅದು ಯಾವುದೇ ರೀತಿಯ ಇವತ್ತಿಗೂ ಭಿನ್ನವಾಗಿಲ್ಲ. ಒಂದು ಕಲ್ಲೂ ಕೂಡ ಭಿನ್ನವಾಗಿಲ್ಲ.  ಈ ಜಾಗೃತಾ ಮಠ ಯಾವುದೇ ರೀತಿಯ ಸರ್ಕಾರಿ ಅಧೀನದಲ್ಲಿ ಒಳಪಡುವುದಿಲ್ಲ. ಹಿರೇಮಠವು ಮಾತ್ರ ಮುಜುರಾಯಿ ಇಲಾಖೆಗೆ ಒಳಪಟ್ಟಿದೆ ಎಂದು ತಿಳಿಯುತ್ತದೆ. ಗಚ್ಚಿನಮಠಕ್ಕೆ ಹಿರೇಮಠದಿಂದ ಸ್ವಾಮಿಯ ಪ್ರಸಾದ ಎಡೆ ತರುತ್ತಾರೆ. ಹಿರೇಮಠದಲ್ಲಿ ಎಲ್ಲ ಕಾರ್ಯಕ್ರಮಗಳು ನಡೆದರೂ ಈ ಮಠಕ್ಕೆ ಬಂದು ಹೋಗುವ ಪ್ರತೀತಿಯಿಂದ ಕೂಡಿದೆ. ಧಾರ್ಮಿಕವಾಗಿ ಬಹಳ ಶಕ್ತಿಯುತ ಮಠ ಎಂದು ಸ್ಥಳೀಯ ವಕ್ತೃಗಳಿಂದ ತಿಳಿಯುತ್ತದೆ. ಕಂದು ಬಣ್ಣ ಹಾಗೂ ಕಪ್ಪು ಬಣ್ಣದ ಕಲ್ಲುಗಳಿಂದ ದೇವಾಲಯ ನಿರ್ಮಾಣವಾಗಿರುವುದು ಕಂಡುಬರುತ್ತದೆ. ಹಾಗೂ ಮೇಲ್ಛಾವಣಿಯು ಗಾರೆಯಿಂದ ಹಾಕಲಾಗಿದೆ. ಹಾಗೂ ಯಾವುದೇ ರೀತಿಯ ಮಣ್ಣು ಮಿಶ್ರಿತವಾದ ಬಳಕೆಯನ್ನು ಮಾಡಿರುವುದು ಕಾಣಲು ಸಿಗುವುದಿಲ್ಲ. ಹಾಗೂ ದೇವಾಲಯ ಮೊದಲು ಬಹಳ ಗಾಢವಾದ ಕತ್ತಲಿನಿಂದ ಕೂಡಿತ್ತು ಎಂಬುದು ವಕ್ತೃಗಳಿಂದ ತಿಳಿಯುತ್ತದೆ. ನಂತರ ಭಕ್ತರಿಂದ ಬೆಳಕಿನ ವ್ಯವಸ್ಥೆಯನ್ನು ಮಾಡಲಾಯಿತು. ಆದರೆ ದೇವಾಲಯಕ್ಕೆ ಯಾವುದೇ ರೀತಿಯ ಬಣ್ಣ ಬಳಿದಿರುವುದಿಲ್ಲ. ಕಾರಣ ನೈಜತೆಯನ್ನು ಕಾಪಾಡಲು ಎಂದು ತಿಳಿಯಬಹುದು. ಈಗಲೂ ಈ ಮಠಕ್ಕೆ ಹೋದರೆ ದೈವೀಶಕ್ತಿಯ ಸಂಪೂರ್ಣವಾದ ಭಾವನೆ ಮೂಡುತ್ತದೆ ಎಂಬುದು  ಮಠಕ್ಕೆ ಬರುವ ಭಕ್ತರಿಂದ ಹಾಗೂ ಸ್ಥಳೀಯರಿಂದ ತಿಳಿಯುತ್ತದೆ.

ಮೊದಲು ಮಠದ ಒಳಗಡೆ ಹೋದರೆ ಸಿಗುವುದು ಗುರುಬಸವ ಜೀವಂತ ಸಮಾಧಿಗೆ ಹೋದ ದಾರಿ ಕಾಣುತ್ತದೆ.  ದಾರಿಯು ಮೊದಲು ತೆರೆದಿತ್ತಂತೆ. ಕಾಲಾಂತರದಲ್ಲಿ ಅದನ್ನು ಮುಚ್ಚಲಾಗಿದೆ.  ಮಠವನ್ನು ಹರಪನಹಳ್ಳಿಯ ಸೋಮಶೇಖರ ರಾಜ ಸ್ವಾಮಿಯ ಸೇವೆಗೆಂದು ಕಟ್ಟಿಸಿದ್ದಾರೆ. ಚಿತ್ರದುರ್ಗದವರು ಸೋಮಶೇಖರನ ಮೇಲೆ ದಾಳಿ ಮಾಡಲು ಬಂದಾಗ ರಾಜರು ಸ್ವಾಮಿಗೆ ಮೊರೆ ಹೋಗುತ್ತಾರಂತೆ. ಅಲ್ಲಿ ಒಂದು ಪವಾಡ ರೀತಿಯಿಂದ ಸೋಮಶೇಖರ ರಾಜ ಗೆದ್ದನೆಂದು ಹೇಳುತ್ತಾರೆ. ಆ ನೆನಪಿಗಾಗಿ ಸ್ವಾಮಿಗೆ ಈ ಮಠವನ್ನು ಕಟ್ಟಿಸಿರಬೇಕು ಎಂಬುದು  ವಕ್ತೃಗಳಿಂದ ತಿಳಿಯುತ್ತದೆ.  ಮಠದಲ್ಲಿ ದೇವರ ವಿಗ್ರಹವನ್ನು ಕಾಣಲು ಸಿಗುವುದಿಲ್ಲ. ಆದರೆ ಅಷ್ಟವರ್ಣಗಳಿಂದ ಮೂರ್ತಿಯ ಪೂಜೆ ಸಂಪ್ರದಾಯ ನಡೆಯುತ್ತದೆ. ಹಿರೇಮಠದಲ್ಲಿ ಯಾವುದೇ ರೀತಿಯ ಆಚರಣೆ ನಡೆದರೂ ಗಚ್ಚಿನಮಠಕ್ಕೆ ಬರುತ್ತದೆ. ಹೀಗೆ  ದೇವಾಲಯಕ್ಕೆ ಅನೇಕ ಭಕ್ತರು ಜಾತ್ರೆಯ ದಿನದಂದು ಬರುವುದು ಕಾಣಬಹುದು. ಕಾರಣ ಸ್ವಾಮಿ ಜೀವಂತ ಸಮಾಧಿಯಾದ ಸ್ಥಳ ಎಂಬ ಪ್ರತೀತಿಯಿಂದ ಕೂಡಿದೆ. ಅದು ಅಷ್ಟು ಸತ್ಯವೂ ಆಗಿದೆ ಎಂದು ಸ್ಥಳೀಯರಿಂದ ಸಿಗುವ ಮಾಹಿತಿಯಾಗಿದೆ.

ಗಚ್ಚಿನಮಠದ ಆವರಣದಲ್ಲಿ ಒಂದು ವೀರಭದ್ರೇಶ್ವರ ದೇವರ ಮೂರ್ತಿಯೂ ಕಂಡುಬರುತ್ತದೆ. ಹಿರೇಮಠದಲ್ಲಿ ಒಳಗಡೆ ಇರುವ ವೀರಭದ್ರೇಶ್ವರ ಮೂರ್ತಿಯನ್ನು ಕಾಣುತ್ತೇವೆ. ಅದರಂತೆ ಈ ಮಠದ ದೇವಾಲಯದ ಆವರಣದಲ್ಲಿ ಇರುವ ಮೂರ್ತಿಯು ಒಂದೇ ಆಕೃತಿಯನ್ನು ಹೊಂದಿದೆ.

ಕೊಟ್ಟೂರಿನ ಪೂರ್ವ ದಿಕ್ಕಿಗೆ ಗಚ್ಚಿನಮಠ ಇದೆ. ಶ್ರೀ ಗುರು ಬಸವೇಶ್ವರರು ರಾಜದರ್ಬಾರು ನಡೆಸುತ್ತಿದ್ದ ಕಾಲದಲ್ಲಿ ಊರ ಹೊರಭಾಗದಲ್ಲಿ ಶಾಂತ ವಾತಾವರಣದಲ್ಲಿ ವಿಶ್ರಾಂತಿ ಪಡೆಯಲು ಈ ಮಠ ಕಟ್ಟಿರಬೇಕು. ಗಚ್ಚಿನಮಠಕ್ಕೆ ಮೂರು ಕಡೆ ದ್ವಾರ ಬಾಗಿಲುಗಳು ಕಂಡುಬರುತ್ತದೆ. ಪೂರ್ವ ದಿಕ್ಕಿಗೆ ಮತ್ತು ಪಶ್ಚಿಮ ದಿಕ್ಕಿಗೆ ಹಾಗೂ ಉತ್ತರ ದಿಕ್ಕಿಗೆ. ಹಾಗೆಯೇ ಮೂರು ದಿಕ್ಕಿನಲ್ಲಿಯೂ ದೇವಾಲಯಕ್ಕೆ ಹೋಗಲು ಬಾಗಿಲುಗಳು ಇರುವುದು ಕಂಡುಬರುತ್ತದೆ. ಹಾಗೂ ದೇವಾಲಯದಲ್ಲಿ 43 ಬೃಹತ್ ಆಕಾರದ ಕಲ್ಲಿನ ಕಂಬಗಳು ಈಶಾನ್ಯ ಮೂಲೆಯ ಒಂದು ಕಂಬದ ಮೇಲೆ ಈ 43 ಕಂಬಗಳು ಭಾರ ಹೊತ್ತಿದೆ ಎಂಬುದು ಅಲ್ಲಿನ ಗಚ್ಚಿನಮಠದ ಅರ್ಚಕರಿಂದ ತಿಳಿಯುತ್ತದೆ.

ಮತ್ತೊಂದು ವಿಶೇಷವಾದ ಪವಾಡವೆಂದರೆ ಮಠದ ಈಶಾನ್ಯ ಮೂಲೆಯಲ್ಲಿ ಒಂದಷ್ಟು ಜಾಗ ಖಾಲಿಯಾಗಿ ಬಿಟ್ಟಿದ್ದಾರೆ. ಅಲ್ಲಿ ನಾಗರಹಾವಿನ ಗುರುತು ಮತ್ತು ನವಿಲಿನ ಹೆಜ್ಜೆಯ ಗುರುತು ಮೂಡುತ್ತವೆ. ಗುರುತುಗಳನ್ನು ಅಳಸಿಹೋದರೂ ಮತ್ತೆ ಬೆಳಗಾಗುವಷ್ಟರಲ್ಲಿ ಮೂಡಿರುತ್ತದೆ ಎಂಬುದು ಈಗಲೂ ಕಾಣಸಿಗುತ್ತದೆ. ದೃಶ್ಯವನ್ನು ಎಲ್ಲರೂ ಕಾಣಬಹುದು ಎಂಬುದು ವರ್ಕ್ತೃಗಳ ಮಾಹಿತಿ. ಇಲ್ಲಿ ಕೆಲವು ಸ್ಥಳೀಯರ ಅಭಿಪ್ರಾಯದಂತೆ ಈ ಮಠವನ್ನು ಸೋಮಶೇಖರ ರಾಜ ಕಟ್ಟಿಸಿದ್ದಾನೆಂದು ಹೇಳುತ್ತಾರೆ. ಮತ್ತೊಂದು ಹೇಳಿಕೆಯಂತೆ ಮಠವನ್ನು ಶರಣರು ಬಂದು ಕಟ್ಟಿದವರು, ಆಗ ಕಟ್ಟುವಾಗ ಬೆಳಗಿನ ಜಾವ ಸೂರ್ಯ ಉದಯ ಆದುದ್ದಕ್ಕೆ ಶರಣರು ಈಶಾನ್ಯ ಮೂಲೆಯ ಜಾಗವನ್ನು ಬಿಟ್ಟು ಹೋದರೆಂದು ಕೆಲವು ಸ್ಥಳೀಯ ವಕ್ತೃಗಳಿಂದ ತಿಳಿಯುತ್ತದೆ.

ಮಠದಿಂದ ಸ್ವಲ್ಪ ದೂರ ಹೋದರೆ ಗದ್ದಿ ಕಲ್ಲೇಶ್ವರ ದೇವಾಲಯವನ್ನು ನೋಡಬಹುದು. ಇದರಲ್ಲಿ ಎರಡು ಶಾಸನಗಳನ್ನು ಕಾಣುತ್ತೇವೆ. ಈ ಶಾಸನಗಳು 15ನೆಯ ಶತಮಾನದ ಶಾಸನಗಳೆಂದು ತಿಳಿದುಬರುತ್ತವೆ. ಮತ್ತು ಗಚ್ಚಿನಮಠಕ್ಕೆ ಮೊದಲು ಪ್ರಸಾದದ ವ್ಯವಸ್ಥೆ ಇರಲಿಲ್ಲ. ನಂತರ ಅಲ್ಲಿಯ ಏರಿಯಾದ ಭಕ್ತರಿಂದ ಪ್ರಸಾದ ಸೇವೆ ಆರಂಭವಾಗಿ ಈಗ ಸುಮಾರು ಸಾವಿರಾರು ಭಕ್ತರಿಗೆ ವಿಶೇಷ ದಿನಗಳಲ್ಲಿ ಪ್ರಸಾದ ಮಾಡುತ್ತಿರುವುದು ಕಂಡು ಬರುತ್ತದೆ.

ಮತ್ತೊಂದು ವಿಶೇಷವಾದ ಸಂಗತಿಯೆಂದರೆ, ದೇವಾಲಯದಲ್ಲಿ ಒಂದೇ ರೀತಿಯ ಕಂಬಗಳಲ್ಲಿ ಕೆತ್ತನೆಗಳು ಸಿಗುವುದಿಲ್ಲ. ಎಲ್ಲಾ ರೀತಿಯ ವಿಗ್ರಹ ಮೂರ್ತಿಗಳಿಂದ ಕೆತ್ತಿರುವುದು ಕಂಡುಬರುತ್ತದೆ. ವಿಶೇಷವಾಗಿ ಬಸವಣ್ಣನ ಮೂರ್ತಿಗಳ ಕೆತ್ತನೆಗಳು ಕಾಣಲು ಸಿಗುತ್ತವೆ. ಈಶ್ವರಲಿಂಗದ ಮೂರ್ತಿಗಳು ಕಾಣಲು ಸಿಗುತ್ತವೆ. ದೇವಾಲಯದ ಹಿಂಭಾಗದಲ್ಲಿ ಅಂದರೆ ಅಡುಗೆ ಪ್ರಸಾದ ಮಾಡುವ ಸ್ಥಳದಲ್ಲಿ ಒಂದು ಸಣ್ಣದಾದ ಬಸವಣ್ಣನ ಮೂರ್ತಿಯನ್ನು ಕೆತ್ತಿದ್ದಾರೆ. ಈ ಮೂರ್ತಿಯಿಂದ ಬಸವ ಅನುಯಾಯಿಗಳಾಗಿದ್ದರು ಎಂಬುದು ತಿಳಿಯುತ್ತದೆ.

ಯುಗಾದಿಯ ಹಬ್ಬದಲ್ಲಿ ನೇರವಾಗಿ ಸೂರ್ಯನ ಕಿರಣಗಳು ದ್ವಾರಬಾಗಿಲ ಮೇಲಿರುವ ಎರಡು ಕಿಂಡಿಗಳ ಮುಖಾಂತರವಾಗಿ ಶ್ರೀಗುರು ಕೊಟ್ಟೂರೇಶ್ವರ ಮೂರ್ತಿಯನ್ನು ಬೆಳಕಿನ ಕಿರಣಗಳು ಸ್ಪರ್ಶಿಸುತ್ತವೆ ಎಂಬುದು ಈ ಮಠದ ಅರ್ಚಕರಿಂದ ತಿಳಿಯುತ್ತದೆ. ಅದೇ ಮುಖ್ಯದ್ವಾರದ ಬಾಗಿಲ ಎಡಭಾಗದಲ್ಲಿ ಒಂದು

ಬಹಳ ಸುಂದರವಾದ ಹಾವಿನ ಮೂರ್ತಿಯನ್ನು ಕೆತ್ತನೆ ಮಾಡಿದ್ದಾರೆ. ಅದು ಈ ದೇವಾಲಯದ ಆವರಣದಲ್ಲಿ ಜೀವಂತವಾಗಿದೆ ಎಂಬ ಮಾಹಿತಿ ಅರ್ಚಕರಿಂದ ಸಿಗುತ್ತದೆ.

ಮತ್ತೊಂದು ವಿಶೇಷವಾದ ಮಾಹಿತಿಯೆಂದರೆ, ಕರಿಲಿಂಗೇಶ್ವರ ವಂಶಸ್ಥರ ತಂಗಿಯನ್ನು ಈ ಮಠದ ಅರ್ಚಕರ ವಂಶಸ್ಥರಿಗೆ ಕೊಟ್ಟಿದ್ದರು ಎಂಬುದು ತಿಳಿಯುತ್ತದೆ. ಹಾಗಾಗಿ ಕೊಟ್ಟೂರೇಶ್ವರರ ಜೀವಂತ ಸಮಾಧಿಯಾದ ಗಚ್ಚಿನಮಠಕ್ಕೆ ಹಿರೇಮಠದಿಂದ ಎಡೆ ಬರುತ್ತಿತ್ತು ಎಂಬುದು ಸ್ಥಳೀಯ ವರ್ಕ್ತ್ಯಗಳಿಂದ ತಿಳಿಯುತ್ತದೆ. ಜೀವಂತ ಯೋಗಸಮಾಧಿಯಾದ ಗಚ್ಚಿನಮಠ ಮುಕ್ತಿಯನ್ನು ಕೊಡುವ ಮಠ ಎಂದು ಎಲ್ಲರೂ ಕರೆಯುತ್ತಾರೆ. ಸ್ಥಳದಲ್ಲಿ ಜೀವಿಸುವ ಎಲ್ಲಾ ಭಕ್ತ ಸಮೂಹದ ಜೀವನದಲ್ಲಿ ಕಷ್ಟಕಾರ್ಪಣ್ಯಗಳನ್ನು ಕಳೆದು ಜ್ಞಾನದ ಕಡೆಗೆ ಕರೆದೊಯ್ಯುವ ಜ್ಞಾನ ದೇವಾಲಯ ಎಂದು ಕರೆಯುತ್ತಾರೆ. ಒಳಗಡೆ ಇರುವಂತಹ ಆವರಣದಲ್ಲಿ ಏಣಿಯ ಹಿಂಭಾಗ ಒಂದು ದೊಡ್ಡದಾದ ದಿಂಬೆಯ ಕಟ್ಟಿಗೆಯನ್ನು ನೋಡಬಹುದು. ಈ ಕಟ್ಟಿಗೆ ಕೊಟ್ಟೂರಿನ ಗ್ರಾಮ ದೇವತೆಯಾದ ಕೊಟ್ರಮ್ಮನ ದೇವಸ್ಥಾನದಲ್ಲಿ ಹಿಂದೆ ಸಿಡಿ ಕಂಬವಾಗಿ ಆಚರಿಸುತ್ತಿದ್ದರು ಎಂದು ತಿಳಿದುಬರುತ್ತದೆ. ಮಠಕ್ಕೆ ಪ್ರಸಾದ ನಿಯೋಗ ಸೇವಾ ಸಮಿತಿ ಟ್ರಸ್ಟ್‌ನಿಂದ ಪ್ರತಿಯೊಂದು ಅಮವಾಸ್ಯೆಗೆ ಪ್ರಸಾದ ಸೇವೆ ಇಂದಿಗೂ ನಡೆಯುತ್ತದೆ. ಜೀವಂತ ಯೋಗ ಸಮಾಧಿಯಾಗಿರುವ ಕೊಟ್ಟೂರೇಶ್ವರರು ಮೂಲ ನಕ್ಷತ್ರದಲ್ಲಿ ಜೀವಂತ ಸಮಾಧಿ ಆದರು ಎಂಬ ಕಾರಣಕ್ಕಾಗಿ ರಥೋತ್ಸವವನ್ನು ಮೂಲ ನಕ್ಷತ್ರದಲ್ಲಿಯೇ ನಡೆಸಲಾಗುತ್ತದೆ.

ದೇವಾಲಯದ ಗೋಪುರವು ಮಧ್ಯಮ ಎತ್ತರವಾಗಿದ್ದು, ಗೋಪುರದ ಮೇಲೆ ಇರುವ ಕಳಸ ಕಾಣುವುದಿಲ್ಲ. ಯಾವುದೇ ರೀತಿಯ ಬಣ್ಣವನ್ನು ದೇವಸ್ಥಾನಕ್ಕೆ ಬಳಿದಿರುವುದಿಲ್ಲ. ಕಾರಣ ನೈಜತೆಯನ್ನು ಕಾಪಾಡಲು ಎಂಬುದು ತಿಳಿಯುತ್ತದೆ. ಮಠದ ಮುಂದೆ ಇರುವಂತಹ ಬಯಲು ಜಾಗದಲ್ಲಿ ಸ್ವಲ್ಪ ಸರ್ಕಾರದ ಸಹಾಯ ಹಸ್ತದಿಂದ ಇರುವ ಜಾಗಕ್ಕೆ ಸುಂದರ ವೈಶಿಷ್ಟ್ಯತೆಯನ್ನು ಕಲ್ಪಿಸಿದರೆ ಈ ಸ್ಥಳ ಪ್ರವಾಸಿಗರ ತಾಣವಾಗುತ್ತದೆ ಎಂಬುದು ತಿಳಿಯುತ್ತದೆ.

**ತೊಟ್ಟಿಲು ಮಠ**

ತೊಟ್ಟಿಲು ಮಠ ಹಿರೇಮಠದಿಂದ ಸ್ವಲ್ಪ ದೂರ ಸಾಗಿದರೆ ಸಿಗುತ್ತದೆ. ಮಠದಲ್ಲಿ ಕೊಟ್ಟೂರೇಶ್ವರರು (ಗುರುಬಸವ) ಆಡಿ ಬೆಳೆದ ಮಠ ಎಂದು ಕರೆಯುತ್ತಾರೆ. ಹಾಗೂ ಮೊದಲು ಮನೆಯಾಗಿತ್ತು ಎಂಬುದು ತಿಳಿಯುತ್ತದೆ. ಮಠ ಪೂರ್ವ ಮತ್ತು ಉತ್ತರ ದಿಕ್ಕುಗಳಿಂದ ಕೂಡಿದ ಮುಖ್ಯ ದ್ವಾರ ಬಾಗಿಲುಗಳು ಕಾಣಸಿಗುತ್ತವೆ. ದೇವಾಲಯದ ಒಳಗಡೆ ಹೋದಾಗ ಒಂದು ಸರಿಯಾದ ದೊಡ್ಡ ಅಂಕಣದಷ್ಟು ಜಾಗ, ಗಾಳಿ ಬೆಳಕಿನಿಂದ ಕೂಡಿರುವಂತ ಜಾಗ ಕಂಡುಬರುತ್ತದೆ.

ತೊಟ್ಟಿಲುಮಠ ಎಂಬ ಹೆಸರು ಬರಲು ಕಾರಣವೇನೆಂದರೆ, ಮಹಾಶಿವ ಭಕ್ತಳಾದ ನಿಂಬಕ್ಕನ ಮನೆ ಇಂದಿನ ಈ ತೊಟ್ಟಿಲು ಮಠ. ನಿಂಬಕ್ಕ ಮತ್ತು ನಿಂಬ್ಯಕ್ಕ ಅಂತಲು ಕರೆಯಲಾಗುತ್ತದೆ. ಮಹಾಶಿವಭಕ್ತಳಾದ ನಿಂಬ್ಯಕ್ಕ ಮೂರ್ಕಲ್ ಮಠದಲ್ಲಿ ನೆಲೆಸಿದ ಹುಚ್ಚನ ರೂಪದಲ್ಲಿದ್ದ ಗುರುಬಸವ ಪವಾಡಗಳನ್ನು ನೋಡಿ ಆನಂದಿಸಿ ಭಕ್ತಳಾಗಿ ಗುರುಬಸವನನ್ನು ನೀನೇ ನನ್ನ ಮಗನಾಗಿ ನನ್ನ ಮನೆಗೆ ಬರಬೇಕೆಂದು ಬೇಡಿಕೊಂಡಳು. ಅದಕ್ಕೆ ಒಪ್ಪದ ಕೊಟ್ಟೂರೇಶ (ಗುರುಬಸವ) ನಿಂಬ್ಯಕ್ಕಳ ಮಗನಾಗಿ ಒಪ್ಪಿ ನಿಂಬಕ್ಕನ

ಮನೆಗೆ ಬರುತ್ತಾನೆ. ಅಮ್ಮ ನಾನು ಸುಮ್ಮನೆ ಕೂಡುವುದಕ್ಕೆ ಆಗುವುದಿಲ್ಲ. ಏನನ್ನಾದರೂ ಕಾಯಕ ಕೊಡು ಮಾಡುತ್ತೇನೆ ಎಂದಾಗ, ಆಗ ನಿಂಬಕ್ಕ ಕಂದಾ ನೀನು ಎಲ್ಲರಂತೆ ಆಡುತ್ತಾ ಸಂತೋಷದಿಂದ ಇರು ಎನ್ನುತ್ತಾಳೆ. ಬಾಲ ಕಾಯಕ ಯೋಗಿಗಳಾದ ಕೊಟ್ಟೂರೇಶ ಕೇಳದೇ ಮನೆಯಲ್ಲಿದ್ದ ಹಸುಗಳನ್ನು ಕಾಯುವ ಕಾಯಕಕ್ಕೆ ಸಿದ್ಧನಾಗುತ್ತಾನೆ. ಒಂದು ದಿನ ದನ ಮೇಯಿಸಲು ಹೋದಾಗ ಭರ್ಜರಿಯಾಗಿ ಗುಡುಗು ಸಿಡಿಲಿನ ರಭಸದಿಂದ ಮಳೆಯಾಗುತ್ತದೆ. ತನ್ನ ಜೊತೆಯಲ್ಲಿದ್ದವರೆಲ್ಲರೂ ಹಸುಗಳನ್ನು ಬಿಟ್ಟು ಮನೆಗೆ ಓಡಿ ಹೋಗುತ್ತಾರೆ. ಆದರೆ ಗುರುಬಸವ ತನ್ನ ಲಿಂಗ ಧ್ಯಾನದಲ್ಲಿ ಕುಳಿತಿದ್ದರು. ನಂತರ ಅವರ ಸ್ನೇಹಿತರು ಬಂದು ತಾಯಿ ನಿಂಬಕ್ಕನಿಗೆ ವಿಷಯ ತಿಳಿಸುತ್ತಾರೆ. ಮಳೆ ನಿಂತು ಹೋದ ಮೇಲೆ ಆ ಜಾಗಕ್ಕೆ ನಿಂಬಕ್ಕ ಬಂದಳು. ಅಲ್ಲಿಂದ ಅವರ ಪವಾಡ ಶಕ್ತಿ ಹೆಚ್ಚಿತು ಎಂಬುದು ಸ್ಥಳೀಯ ವಕ್ತೃಗಳಿಂದ ಸಿಗುವಂತಹ ಮಾಹಿತಿಯಾಗಿದೆ.

ಮಠದಲ್ಲಿ ಸ್ವಾಮಿಯು ಆಟವಾಡಿ ಬೆಳೆದ ತೊಟ್ಟಿಲು ಕೂಡ ಇದೆ. ಮಠದ ಎಡಭಾಗದಲ್ಲಿ ತೊಟ್ಟಿಲನ್ನು ಹಾಕಿದ್ದಾರೆ. ಇದಕ್ಕೆ ಬೆಳ್ಳಿಯ ಕವಚವನ್ನು ಮಾಡಿರುವುದನ್ನು ಕಾಣುತ್ತೇವೆ. ಮಕ್ಕಳು ಇಲ್ಲ ಎಂದು ಬಂದವರಿಗೆ ಗುರುಬಸವ(ಕೊಟ್ಟೂರೇಶ್ವರರು) ಮಕ್ಕಳನ್ನು ಕರುಣಿಸಿದ್ದಾರೆ ಎಂಬುದು ಮಠಕ್ಕೆ ಬಂದ ಭಕ್ತಾಧಿಗಳ ನಂಬಿಕೆಯಿಂದ ತಿಳಿಯುತ್ತದೆ. ಸುಮಾರು 10–20 ವರ್ಷಗಳಿಂದ ಮಕ್ಕಳಿಲ್ಲದವರು ತೊಟ್ಟಿಲ ಮಠಕ್ಕೆ ಬಂದು ಉಡಿಯನ್ನು ತುಂಬಿಸಿಕೊಂಡು ತೊಟ್ಟಿಲು ತೂಗಿ ಹೋದರೆ ಮಕ್ಕಳಾಗುತ್ತವೆ ಎಂಬ ನಂಬಿಕೆಯಂತೆ ಈಗಲೂ ಪವಾಡ ಇದೇ ರೀತಿಯಂತೆ ಒಳಿತು ಮಾಡುತ್ತಲೇ ಬಂದಿದೆ.

ಮಠದಲ್ಲಿ ಸ್ವಾಮಿ ಗುರುಬಸವ ಬೆಳ್ಳಿಯ ಮೂರ್ತಿಯನ್ನು ಕಾಣುತ್ತೇವೆ.(ಮಂದಹಾಸನದ ಮೇಲೆ ಕುಳಿತಿದ್ದಾರೆ) ಮಠದ ದೇವಾಲಯ ಪೂರ್ವಕ್ಕೆ ಮತ್ತು ಉತ್ತರಕ್ಕೆ ಎರಡು ದ್ವಾರ ಬಾಗಿಲುಗಳು ಇವೆ. ಹಾಗೂ ಹಿಂದೆ ನಿಂಬಕ್ಕನ ಮನೆಯಾಗಿದ್ದುದರಿಂದ ಆ ಮನೆಯ ದಾರಿಯ ಮುಂದೆ ಸಾಯಂಕಾಲ ಸಂತರು ವಿಹಾರಕ್ಕೆ ಆ ಮಾರ್ಗವಾಗಿ ಹೋಗುತ್ತಿರುವಾಗ ದಿನಾಲು ಎಲೆ, ಅಡಿಕೆಯನ್ನು ಇಟ್ಟು ನಮಸ್ಕರಿಸುತ್ತಿದ್ದರು. ಈಗಲೂ ಕೂಡ ಹಿರೇಮಠದಿಂದ ಗಚ್ಚಿನಮಠಕ್ಕೆ ಸ್ವಾಮಿಯ ಪಲ್ಲಕ್ಕಿ ಹಾಗೂ ಬೆಳ್ಳಿ ರಥ ಆ ಮಾರ್ಗವಾಗಿ ಹೋಗುವ ಸಂದರ್ಭದಲ್ಲಿ ತೊಟ್ಟಿಲ ಮಠದ ಮುಂದೆ ಎಲೆ ಅಡಿಕೆಯನ್ನು ಕೊಟ್ಟು ನಮಸ್ಕರಿಸುವುದನ್ನು ಈಗಲೂ ಕಾಣಲು ಸಿಗುತ್ತದೆ ಎಂಬುದು ಅಲ್ಲಿಯ ಮಠದ ಅರ್ಚಕರು ಹಾಗೂ ಸ್ಥಳೀಯ ವಕ್ತೃಗಳ ಹೇಳಿಕೆಯಂತಿದೆ.

ಮಠದ ಆವರಣದಲ್ಲಿ ನಡೆದ ಮತ್ತೊಂದು ಸಂಗತಿಯೆಂದರೆ ಸುಮಾರು 10–12 ವರ್ಷಗಳ ಹಿಂದೆ ದೇವಾಲಯದ ಜೀರ್ಣೋದ್ಧಾರ ನಡೆಯುವ ಕಾರ್ಯ ಸಮಯದಲ್ಲಿ ನೆಲದ ಬುನಾದಿಯನ್ನು ಅಗೆಯುವಾಗ ಒಂದು ದೊಡ್ಡ ಪೆಟ್ಟಿಗೆಯ ತುಂಬಾ ಅನೇಕ ರೀತಿಯ ಪೂಜಾ ಸಾಮಾಗ್ರಿಗಳು ನೆಲದಲ್ಲಿ ಸಿಕ್ಕಿರುವುದು ಕಂಡುಬರುತ್ತದೆ. ಅದರಲ್ಲಿ ಗಂಟೆ, ದೀಪಗಳು, ಕಮಂಡಲು, ಹೀಗೆ ಅನೇಕ ಪೂಜಾ ಸಾಮಾನುಗಳು ಸಿಕ್ಕಿರುವುದಕ್ಕೆ ಇದು ಮನೆಯಾಗಿತ್ತು ಎಂಬುದು ಇಲ್ಲಿಯ ಸಾಕ್ಷಾಧಾರಗಳಿಂದ ತಿಳಿಯುತ್ತದೆ.

**ಮೂರ್ಕಲ್ ಮಠ**

ಮೂರ್ಕಲ್ ಮಠವು ಕೊಟ್ಟೂರೇಶ್ವರ ಮೊದಲನೇ ಮಠವೆಂದು ಕರೆಯುವ ಪ್ರತೀತಿ ಇದೆ. ಈ ಮಠಕ್ಕೆ ಸರಿಯಾದ ಮೂಲ ಸೌಲಭ್ಯಗಳು ಇಲ್ಲ ಎಂಬುದು ನಮಗೆ ವಕ್ತೃಗಳಿಂದ ತಿಳಿಯುತ್ತದೆ. ಕೊಟ್ಟೂರೇಶ್ವರ ಸ್ವಾಮಿಯ ರಥೋತ್ಸವವನ್ನು ನಿಲ್ಲಿಸುವ ಜಾಗದಲ್ಲಿ ಮಠ ಇರುವುದು ಕಂಡು ಬರುತ್ತದೆ. ಸ್ವಾಮಿಯು ಅರಸಿ ನೆಲೆಸಿ ಮಹಿಮೆ ತೋರಿದ ಪ್ರಥಮ ಮಠವೇ ಮೂರ್ಕಲ್ ಮಠ ಎಂದು ಕರೆಯುತ್ತಾರೆ. ಮೂರ್ಕಲ್ ಎಂಬ ಹೆಸರು ಬಂದಿರುವುದು ಸ್ಥಳೀಯರಿಂದ ಸಿಗುವಂತಹ ಮಾಹಿತಿಯೆಂದರೆ ಈ ಮಠವು ಮೂರು ಗರ್ಭ ಗುಡಿಯಿಂದ ಕೂಡಿದೆ. ಅದರಲ್ಲಿ ಮೂರು ದೊಡ್ಡ ಗಾತ್ರದ ಕಪ್ಪುಶಿಲೆಯಿಂದ ಮಾರ್ಪಟ್ಟ ಶಿವಲಿಂಗವನ್ನು ಕಾಣುತ್ತೇವೆ. ದೇವಾಲಯದ ಒಳಗೆ ಒಂದಕ್ಕಿಂತ ಒಂದು ಭಿನ್ನವಾಗಿವೆ. ಗುಡಿಯಲ್ಲಿ ಇರುವ ಶಿಲೆಗಳು ಪೂರ್ವ ಮತ್ತು ದಕ್ಷಿಣೋತ್ತರ ದಿಕ್ಕುಗಳಿಗೆ ಮುಖ ಮಾಡಿ ಕುಳಿತಿರುವ ಮೂರು ಶಿವಲಿಂಗಗಳನ್ನು ಕಾಣುತ್ತೇವೆ. ದೇವಾಲಯದ ಒಳಗಡೆ ಪ್ರವೇಶಿಸಿದಾಗ ಮುಖ್ಯ ದ್ವಾರದಿಂದ ನೇರವಾಗಿ ಕಾಣಲು ಸಿಗುವ ಶಿವಲಿಂಗ ಮೂರ್ತಿಯನ್ನು ನೋಡಬಹುದು. ಹಾಗೆ ನಮಗೆ ಎಡಭಾಗದಲ್ಲಿ ಶಿವಲಿಂಗ ಮೂರ್ತಿಯನ್ನು ನೋಡುತ್ತೇವೆ. ಅದರಂತೆ ಬಲಭಾಗದಲ್ಲಿ ಒಂದು ನಾಗದೇವರ ಒಂದು ಕಂಚಿನ ಮೂರ್ತಿಯನ್ನು ಇಟ್ಟಿದ್ದಾರೆ. ಈ ಮೂರ್ತಿಯ ಕೆಳಗೆ ಒಂದು ಗುಹೆ ಇದೆ ಎಂದು ಸ್ಥಳೀಯರಿಂದ ಸಿಗುವಂತಹ ಮಾಹಿತಿಯಾಗಿದೆ. ಹಾಗೂ ದೇವಾಲಯವು ಜೈನ ಶಿಲೆಯಿಂದ ಕೂಡಿದ ದೇವಾಲಯವಾಗಿದೆ ಎಂದು ತಿಳಿಯುತ್ತದೆ. ಶಿವಲಿಂಗದ ಪಾಣಿಬಟ್ಟಲು 5 ರಿಂದ 6 ವೃತ್ತಗಳಿಂದ ಹೊಂದಿದೆ. ಇದರಿಂದ ಜೈನ ದೇವಾಲಯವೆಂದು ತಿಳಿಯುತ್ತದೆ. ಈ ದೇವಾಲಯದ ಗುಡಿಯ ಮುಂಭಾಗದಲ್ಲಿ ಒಂದು ಹೊಯ್ಸಳರ ವಂಶಸ್ಥರ ಕ್ರಿ.ಶ.1221ರ ಶಿಲಾಶಾಸನವನ್ನು ಕಾಣುತ್ತೇವೆ. ಇದರ ಪ್ರಕಾರ ಮಠವು ಉಡುಕೇಶ್ವರ ಸ್ವಾಮಿಯ ದೇವಾಲಯವೆಂದು ತಿಳಿದುಬರುತ್ತದೆ. ಮಠದಲ್ಲಿ ಮೂರು ಶಿಲಾ ಗೋಪುರಗಳನ್ನು ಚಾಳುಕ್ಯ ಮತ್ತು ಹೊಯ್ಸಳರ ಕಾಲದ ಜೈನರ ಶಿಲಾಕೃತಿಯ ಮಾದರಿಯಲ್ಲಿದೆ. ಗುಡಿಯನ್ನು ತ್ರಿಕೂಟೇಶ್ವರ ದೇವಾಲಯವೆಂದು ಕೂಡಾ ಕರೆಯುತ್ತಾರೆ. ಮೂರ್ಕಲ್ ಮಠವನ್ನು ಊರಿನ ಉತ್ತರ ಭಾಗದ ಮಧ್ಯದಲ್ಲಿ ಬರುತ್ತದೆ. ಪೂರ್ವಾಭಿಮುಖವಾಗಿರುವ ತ್ರಿಕೂಟೇಶ್ವರ ದೇವಾಲಯವು ಕದಂಬರ ನಾಗರಶಿಲೆಯ ಶಿಖರಗಳಿಂದ ಶೋಭಿಸುತ್ತದೆ. ಪಿರಾಮಿಡ್ ಆಕಾರದಲ್ಲಿರುವ ಮೂರು ಕಲ್ಲಿನ ಶಿಖರಗಳಿಂದ ಕೂಡಿದೆ. ಆದ್ದರಿಂದ ಇದನ್ನು ಮೂರ್ಕಲ್ ಮಠ ಎಂದು ಕರೆದಿರುವುದು ತಿಳಿಯುತ್ತದೆ.

ಇಲ್ಲಿರುವ ಲಿಂಗಗಳು ಮೂರು ಅಡಿಗಳಷ್ಟು ಎತ್ತರ ಇರುವುದನ್ನು ಕಾಣುತ್ತೇವೆ. ಸುತ್ತಲೂ ದೇವಾಲಯದ ವಾತಾವರಣವನ್ನು ಕಲ್ಪಿಸಬೇಕಾಗಿದೆ ಎಂದು ವಕ್ತೃಗಳಿಂದ ತಿಳಿಯುತ್ತೇವೆ. ಸುತ್ತಲೂ ಮನೆಗಳಿಂದ ದೇವಾಲಯದ ಜಾಗವನ್ನು ಆಕ್ರಮಣ ಮಾಡಿದ್ದಾರೆ ಎಂಬುದು ನಮಗೆ ಸ್ವಲ್ಪ ಸುತ್ತ ಮುತ್ತಲಿರುವ ಮನೆಗಳ ಕೋಣೆಗಳು ದೇವಾಲಯಕ್ಕೆ ಅಂಟಿಕೊಂಡಿರುವುದು ಕಂಡುಬರುತ್ತದೆ. ಯಾವುದೇ ರೀತಿಯ ಸರಿಯಾದ ವಾತಾವರನ ಮಠಕ್ಕೆ ದೊರಕಿಲ್ಲ ಎಂಬುದು ಸ್ಥಳೀಯ ವಕ್ತೃಗಳಿಂದ ಸಿಗುವಂತಹ ಹೇಳಿಕೆಯಾಗಿದೆ. ಈ ಮಠದ ಮುಂದಿರುವ ಶಾಸನವನ್ನು ನಿರ್ಲಕ್ಷ್ಯತೆಯಿಂದ ಎಡಭಾಗದಲ್ಲಿ ಇಟ್ಟಿರುವುದು ಕಂಡು ಬರುತ್ತದೆ.

ಮೂರು ದೊಡ್ಡ ಬಂಡೆಯಿಂದ ನಿರ್ಮಾಣವಾದ ಕಾರಣಕ್ಕೆ ಮೂರ್ಕಲ್ ಮಠ ಎಂದು ಕರೆದಿದ್ದಾರೆಂದು ದೇವಾಲಯದ ಆವರಣದಲ್ಲಿರುವ ಇಲ್ಲಿಯ ಸ್ಥಳೀಯ ಹಿರಿಯರ ಅಭಿಪ್ರಾಯವಾಗಿದೆ.

ಮರಿ ಕೊಟ್ರೇಶ್ವರರ ಮೂಲ ಮಠ ಎಂಬ ಪ್ರತೀತಿಯಿಂದ ಕೂಡಿದೆ. ಆದರೆ ಯಾವುದೇ ರೀತಿಯ ಕೊಟ್ಟೂರೇಶ್ವರರ ಪ್ರತಿಮೆ, ಮೂರ್ತಿ ಕಾಣಸಿಗುವುದಿಲ್ಲ. ಕೊಟ್ಟೂರೇಶ್ವರ ಸ್ವಾಮಿಯ ಯಾವುದೇ ಕಾರ್ಯ ನಡೆದರೂ ಮಠಕ್ಕೆ ಬಂದು ಹೋಗುವ ಸಂಪ್ರದಾಯ ಇದೆಯಂತೆ. ಭಕ್ತರ ಆಗಮನ ಬಹಳ ಕಡಿಮೆ ಆಗಿದೆ ಎಂಬುವುದು ಅಲ್ಲಿರುವ ಒಂದು ನಾಮಫಲಕವನ್ನು ಕೂಡ ಹಾಕಿದ್ದಾರೆ. 17ನೇ ಶತಮಾನದ ಕೊನೆಯ ದಶಕದಲ್ಲಿ ಕೊಟ್ಟೂರಿಗೆ ಆಗಮಿಸಿದ ಶ್ರೀ ಗುರು ಬಸವರು ಮೊದಲು ದೇವಾಲಯದಲ್ಲಿ ವಾಸ್ತವ್ಯ ಹೂಡಿದ್ದರು. ಇಲ್ಲಿರುವ ಉಡುಕೇಶ್ವರ ಆರಾಧನೆಯಿಂದ ಕೂಡಿದ್ದರೆಂದು ತಿಳಿದುಬರುತ್ತದೆ. ಮಠದಿಂದ ಕೊಟ್ಟೂರೇಶ್ವರರ ಪವಾಡ ಶಕ್ತಿಯನ್ನು ಜನರಿಗೆ ಸಾರಿದ್ದರೆಂಬುವುದು ವರ್ಕ್ಯಗಳಿಂದ ತಿಳಿಯುತ್ತದೆ. ಮೂರ್ಕಲ್ ಮಠಕ್ಕೆ ಹುಚ್ಚನ ರೂಪದಲ್ಲಿ ಬಂದು ಜನರಿಗೆ ಕಂಗೊಳಿಸಿ ಜಗದ ಹುಚ್ಚು ಬಿಡಿಸಿದ ಮಹಾ ಮಹಿಮಾ ಪುರುಷರು ಎಂದು ತಿಳಿಯಲಾಗುತ್ತದೆ. ಮಠದ ಆವರಣದಲ್ಲಿ ನಾವು ಹಳೇ ರಥೋತ್ಸವವನ್ನು ನಿಲ್ಲಿಸಿರುವುದನ್ನು ನೋಡಬಹುದು. ಮೂರ್ಕಲ್ ಮಠದ ದೇವಾಲಯದ ಒಳಗಡೆ ಸುಂದರವಾದ ಶೂನ್ಯ ಆಕೃತಿಯ ಕಂಬಗಳಿಂದ ಕೆತ್ತಿರುವುದು ಕಾಣುತ್ತದೆ. ಮತ್ತು ದೇವಾಲಯದ ಆವರಣದಲ್ಲಿರುವ ಶಾಸನಗಳು ಇವುಗಳನ್ನು ಸಂರಕ್ಷಣೆಯಾಗಿ ಕಾಪಾಡಿಕೊಂಡಲ್ಲಿ ಮುಂದಿನ ಪೀಳಿಗೆಗೆ ಇಲ್ಲಿರುವಂತಹ ಮಾಹಿತಿ ಉಪಯುಕ್ತವಾಗಿ ತಿಳಿಯಲು ಸಹಕಾರಿಯಾಗುತ್ತದೆ.

**ಮರಿ ಕೊಟ್ರೇಶ್ವರ ದೇವಾಲಯ**

ಮರಿ ಕೊಟ್ರೇಶ್ವರ ದೇವಾಲಯವನ್ನು ಕೊಟ್ಟೂರಿನ ಊರ ಹೊರ ವಲಯದಲ್ಲಿ ಇದೆ. ಮರಿ ಕೊಟ್ರೇಶ್ವರ ಎಂಬ ಹೆಸರೇ ಸೂಚಿಸುವಂತೆ ದೇವಾಲಯವು ಸಣ್ಣ ದೇವಾಲಯವಾಗಿದೆ. ಕೊಟ್ಟೂರಿನಿಂದ ಹರಪನಹಳ್ಳಿಗೆ ಹೋಗುವಾಗ ಕೊಟ್ಟೂರಿನ ಊರ ವಲಯದಲ್ಲಿ ಸಿಗುತ್ತದೆ. ಧಾರ್ಮಿಕವಾಗಿ ಉಳಿದ ನಾಲ್ಕೂ ಮಠಗಳಂತೆ ಕೂಡ ಶಕ್ತಿ ವಿಸ್ಮಯವಾಗಿದೆ ಎಂಬುದು ಇಲ್ಲಿಯ ಸ್ಥಳೀಯ ಅರ್ಚಕರಿಂದ ಸಿಗುವಂತಹ ಮಾಹಿತಿಯಾಗಿದೆ. ಉತ್ತರ ದಿಕ್ಕಿಗೆ ಮುಖವಾಗಿರುವುದು ಕಂಡುಬರುತ್ತದೆ. ಹಾಗೂ ಇಲ್ಲಿಯ ಕೊಟ್ಟೂರೇಶ್ವರ ಮೂರ್ತಿಯು ಬೆಳ್ಳಿಯ ಆಭರಣದಿಂದ ಕೂಡಿದೆ. ಕೊಟ್ಟೂರೇಶ್ವರರು ಸೋಮಶೇಖರ ರಾಜನಿಗೆ ಯುದ್ಧಕ್ಕೆ ಹೋಗುವಾಗ ಆಶೀರ್ವಾದ ಮಾಡಿದ ಜಾಗ ಎಂದು ಕರೆಯುತ್ತಾರೆ. ಆದ ಕಾರಣ ಈ ಮಠದಲ್ಲಿ ಸೋಮಶೇಖರ ರಾಜನಿಗೆ ಕೊಟ್ಟೂರೇಶ್ವರರು(ಗುರುಬಸವ) ಆಶೀರ್ವಾದ ಮಾಡುತ್ತಿರುವ ಬೆಳ್ಳಿಯ ಚಿತ್ರ ಕಾಣಲು ಸಿಗುತ್ತದೆ. ಈ ಚಿತ್ರವು ಇನ್ನುಳಿದ ಯಾವ ಮಠದಲ್ಲಿ ಕಾಣಲು ಸಿಗುವುದಿಲ್ಲ. ಈ ಮಠದ ಕೊಟ್ಟೂರೇಶ್ವರರು ಕೂಡ ಪೂಜಿಸುವ ಮೂರ್ತಿಯನ್ನು ಸಂಪೂರ್ಣವಾಗಿ ಬೆಳ್ಳಿಯ ಮೂರ್ತಿಯಾಗಿದ್ದು, ಅದರ ಆಸನವು ಮಂದಾಸನವು ಬೆಳ್ಳಿಯ ಲೇಪನದಿಂದ ಕೂಡಿದೆ ಎಂಬುದು ಕಂಡುಬರುತ್ತದೆ.

ಕೊಟ್ಟೂರೇಶ್ವರರು ಪಾದಗಟ್ಟಿಯ ಸ್ಥಳ ಎಂದು ಕೂಡ ಕರೆಯುತ್ತಾರೆ. ಈ ಗದ್ದಿಗೆ 4 ಅಡಿ ಎತ್ತರವಿದೆ. ಕೊಟ್ಟೂರೇಶ್ವರರ ಮೂರ್ತಿಯ ಎದುರಿಗೆ ಬಸವಣ್ಣ ಮೂರ್ತಿಯು ಇದೆ. ಮತ್ತು ದೇವಾಲಯದ ಮುಖ್ಯ ದ್ವಾರದ ಒಳಗಡೆ ಬರುವಾಗ ನಾಗದೇವತೆಯ ಮೂರ್ತಿಯು ಇರುತ್ತದೆ. ಎರಡೂ ಮೂರ್ತಿಗಳು ಕಲ್ಲಿನಿಂದ

ಕೆತ್ತಿದ್ದಾರೆ ಎಂಬುದು ತಿಳಿಯುತ್ತದೆ ಹಾಗೂ ಹೊಸದಾದ ಶೈಲಿಯಲ್ಲಿದೆ. 24–09–1990ರಲ್ಲಿ ಗುಡಿಯನ್ನು ಜೀರ್ಣೋದ್ಧಾರ ಮಾಡಿದ್ದಾರೆ ಎಂಬುದು ತಿಳಿಯುತ್ತದೆ.

**ಪರಾಮರ್ಶನ ಗ್ರಂಥಗಳು**


- ಅರ್ಜುನ ಯು., ಗೊಳಸಂಗಿ. (1995). *ಗೊಳಸಂಗಿ ಗ್ರಾಮ ಒಂದು ಸಾಂಸ್ಕೃತಿಕ ಅಧ್ಯಯನ.* ಮಲ್ಲಿಕಾರ್ಜುನ ಪ್ರಕಾಶನ
- ಬಸವರಾಜ ಇ. ಎಂ., (2018, ಮೇ 9). *ಶರಣರ ಸ್ಮರಣೆಗೆ ಕೈದೀವಿಗೆ.* (ಬೋಧಿವೃಕ್ಷ). ವಿಜಯ ಕರ್ನಾಟಕ ಪತ್ರಿಕೆ.
- ಚನ್ನಣ್ಣ ವಾಲೀಕಾರ. (1991). *ಒಂದು ಗ್ರಾಮದ ಜಾನಪದೀಯ ಅಧ್ಯಯನ.* ಅಕ್ಷರ ಪ್ರಕಾಶನ.
- ಚಿದಾನಂದಮೂರ್ತಿ. (2000). *ವೀರಶೈವ ಧರ್ಮ ಭಾರತೀಯ ಸಂಸ್ಕೃತಿ.* ಮಿಂಚು ಪ್ರಕಾಶನ.
- ಈಶ್ವರನ್ ಹಿರೇಮಲ್ಲೂರ, ಕೆ. (1972). *ಭಾರತದ ಹಳ್ಳಿಗಳು.* ಪ್ರಸಾರಾಂಗ ಮೈಸೂರು ವಿ.ವಿ.
- ಗೋವಿಂದರಾಜು, ಟಿ. (1998). *ಚನ್ನದೇವಿ ಅಗ್ರಹಾರ ಜಾನಪದೀಯ ಅಧ್ಯಯನ.* ತಳಗವಾಡಿ ಪ್ರಕಾಶನ.
- ಜೋಗನ್ ಶಂಕರ್. (1995). *ಗ್ರಾಮ ಸಮಾಜ.* ಜೀವ ಪ್ರಕಾಶನ.
- ಕೊಟ್ರಸ್ವಾಮಿ, ಎ.ಎಂ.ಎಂ. (2005). *ಪರಿಪೂರ್ಣ ಪ್ರಣವ ಪ್ರತಿಷ್ಠಾನ.*
- ಕೊಟ್ರಪ್ಪ, ಎಚ್.ಎನ್. (2005). *ಶ್ರೀ ಗೋಣಿ ಬಸವೇಶ್ವರ ಐತಿಹಾಸಿಕ ನಾಟಕ.* ಇಂಚರ ಪ್ರಕಾಶನ.
- ಕೊಟ್ರಯ್ಯ, ಸಿ. ಎಚ್. ಎಂ., (2008). ಶಾಸನಗಳಲ್ಲಿ ಕೊಟ್ಟೂರಿನ ಕೃತಿ, ಪ್ರಣವ ಪ್ರತಿಷ್ಠಾನ
- ಪರಮಶಿವಮೂರ್ತಿ, ಡಿ.ವಿ. (2007). *ಚಾರಿತ್ರ್ಯ ಕರ್ನಾಟಕ.* ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.